
ಕೊರವಂಜಿ



Koravanji

ಅಕ್ಟೋಬರ್ ೧೯೪೪

ಮಾಸ ಪತ್ರಿಕೆ

ಸಂಪಾದಕರು :
ಶ್ರೀ|| ರಾ. ಶಿ.

ಚಿತ್ರಕಾರರು :
ಶ್ರೀ|| ಆರ್. ಕೆ. ಲಕ್ಷ್ಮಣ್

ಬರಹಗಾರರು :

ಶ್ರೀ|| ಕಿಟ್ಟಣ್ಣ
ಶ್ರೀ|| ರಘುನಾಥ
ಶ್ರೀಮತಿ ಜಯಲಕ್ಷ್ಮೀ
ಆರ್. ಶ್ರೀನಿವಾಸನ್
ಶ್ರೀ|| ಪಾತಾಳಿ
ಶ್ರೀ|| ಕೇ. ಘ.
ಶ್ರೀ|| ವೈ. ವೆಂ. ಕೃಷ್ಣಸ್ವಾಮಿ
ಶ್ರೀ|| ಶಿವಣ್ಣ

ಬಿಡಿ ಪತ್ರಿಕೆ -- ಕೇವಲ ಎರಡಾಣೆ

ಶ್ರೀ ನಗೆಯ ಮಾಸ ಪತ್ರಿಕೆ.

ಭಾರತೀಯ ಕಾರ್ಮಿಕರಿಂದ

ಭಾರತೀಯ ಬಂಡವಾಳಗಾರರಿಂದ

ಭಾರತೀಯ ಕಲಾಕೌಶಲ್ಯದಿಂದ


ಕೂಡಿರುವುದೇ

ಬೆಂಗಾಲ್ ಲ್ಯಾಂಪ್ಸ್

ತಯಾರಿಕೆಯ ವೈಶಿಷ್ಟ್ಯ

ಭಾರತದಲ್ಲೆಲ್ಲಾ ಉತ್ತಮವಾದುದೆಂದು

ಖ್ಯಾತಿಪಡೆದಿದೆ



ಕುಹಕಿಡಿಗಳು

' ಗಾಂಧಿ ಜಿನ್ನಾ ಸಂಧಾನವು ವಿಫಲವಾಯಿತು " ಶಿರೋನಾಮೆ.

—ಛೆ, ಹಾಗೆನ್ನಬಾರದು. "ಗಾಂಧಿ ಜಿನ್ನಾ ಚರ್ಚೆಯು ಚರ್ಚಿಲ್ಲರಿಗೆ ಅನುಕೂಲವಾಯ್ತು " ಎನ್ನಬೇಕು.

✦ ✦ ✦

ಮೈಸೂರಿನಲ್ಲಿ ದಸರಾ ವಸ್ತುಪ್ರದರ್ಶನಕ್ಕೆ ಶ್ರೀಯುತ..........ಇತ್ಯಾದಿಗಳು ಬಂದಿದ್ದರು.

—ಇದನ್ನು ಬೇರೆ ರೀತಿ ಅಪಾರ್ಥವಾಗದಂತೆ ಹೇಳಬಾರದೆ ?

✦

ಅಮೆರಿಕಾದಲ್ಲಿ ರೂಸ್‌ವೆಲ್ಟ್ ಡ್ಯೂಯಿ ಇವರುಗಳ ಚುನಾವಣಾಕಾರ್ಯವು ಆರಂಭಿಸಿದೆ.

—ಅಂಪಮೇಲೆ, ಈಗ ಮೂರು ಸಮರ ಕೇಂದ್ರಗಳಾಯಿತು–ಯೂರೋಪ್, ಜಪಾನ್, ಅಮೆರಿಕಾ—

✦ ✦ ✦

ಭರತಮಾತೆಯು ಗೋಳಿಡುತ್ತಿರುವಳಂತೆ—

—ಒಬ್ಬ ಮಗ ತಾ ನಿನ್ನ ಹೊಟ್ಟೆಯಲ್ಲಿ ಹುಟ್ಟಿದವನೇ ಅಲ್ಲ ಎನ್ನುತ್ತಿದ್ದಾನಂತೆ—

ಮದ್ರಾಸಿನಲ್ಲಿ ಡಾಕ್ಟರ್ ಅಂಬೇಡ್ಕರರು ಬ್ರಾಹ್ಮಣರನ್ನು ಹೀನಾಮಾನವಾಗಿ ಬೈದರಂತೆ—

—ಅವರಿಗಿಂತಲೂ ಬ್ರಾಹ್ಮಣರನ್ನು ಹೀನಾಮಾನ ಬೈಯ್ಯಬೇಕಾದರೆ ಬ್ರಾಹ್ಮಣರನ್ನೇ ಆರಿಸಬೇಕು—

ಇಡೀ ಭಾರತದಲ್ಲಿ ಆಹಾರದ ಸಮಸ್ಯೆಯು ಉತ್ಕಟಾವಸ್ಥೆಯಲ್ಲಿರುವದಂತೆ—

ಅದಕ್ಕೇ ಭಾರತ ಆಹಾರ ಸರಬರಾಜು ಅಧಿಕಾರಿಗಳು ನಮ್ಮ ದೇಶಕ್ಕೆ ಒಂದೆರಡು ದಿನ ಬಂದು ಹೊಟ್ಟೆತುಂಬ ಉಂಡು ಹೋಗುವುದು!

ಕೋತಿ ಕಾಡಹಂದಿಗಳಿಂದ ನಮ್ಮ ಧಾನ್ಯವೆಲ್ಲಾ ನಾಶಹೊಂದುತ್ತಿವೆ ಎಂದು ಉದ್ಗಾರ.

—ಯುದ್ಧಕೈದಿಗಳ ಶಿಬಿರವು ನಮ್ಮ ದೇಶದಿಂದ ದೂರವಾದರೂ ಈ ದೂರೇ?

“ನವದಂಪತಿಗಳಿಗೆ ಸಮಾಜವು ಏನೂ ಸಹಾಯ ಮಾಡುವುದಿಲ್ಲ”.

—ಒಂದೊಂದೂರಿನಲ್ಲೂ ಹತ್ತು-ಹನ್ನೆರಡು ಸಿನಿಮಾಗಳಿರುವುದನ್ನು ಮರೆತಂತಿದೆ—

ಯುದ್ಧಾನಂತರ ಜರ್ಮನಿಯಲ್ಲಿ ಆರ್ಥಿಕ ಪುನರ್ವ್ಯವಸ್ಥೆಯನ್ನು ಮಾಡಲ ಹಂಚಿಕೆಯು ಏರ್ಪಾಡಾಗಿರುವುದಂತೆ—

—ನಮ್ಮ ವರಮಾನತೆರಿಗೆಯಧಿಕಾರಿಗಳು ಅಲ್ಲಿಗೆ ಈ ಹಂಚಿಕೆಯನ್ನು ಸಾರ್ಥಕಗೊಳಿಸಲು ಹೋಗುವರಂತೆ.

——o——

ಉರಿಗಾಳು

"ತರುಣ ತರುಣಿಯರು ಬರಬರುತ್ತ ಹಿಂಜರಿಯುತ್ತಿದ್ದಾರೆ" (ಗ್ರಂಥವೊಂದರಲ್ಲಿ)...........ಹೌದು. ಸಿನಿಮ ಮಂದಿರಗಳಲ್ಲಿ.

❖ ❖ ❖

'ಶ್ರೀಮಾನ್....ರು ಹುಟ್ಟು ಕವಿಗಳು!" (ಪ್ರಶಸ್ತಿ ಲೇಖನ).......ಮತ್ತೆ, ಅವರನ್ನು ಬೈದೇನು ಫಲ?

❖ ❖ ❖

"ಬಂಗಾಳದಲ್ಲಿ ಫುಟ್‌ಬಾಲನ್ನು ಯಾವುದೋ ಒಂದು ರೀತಿಯಲ್ಲಿ ಆಡುತ್ತಾರೆ" (ದಿನ ಪತ್ರಿಕೆ) ... ನಮ್ಮ ದಸರಾ ಟೂರ್ನಮೆಂಟಿಗೆ ಬಂದ ಬೆಂಗಳೂರು ಟೀಮುಗಳೂ ಅಷ್ಟೆ.

❖ ❖ ❖

ಶಾಂತಿ ಸಮ್ಮೇಳನಕ್ಕೆ ಮುಂಚೆಯೇ ಪ್ರಪಂಚದಲ್ಲಿರುವ ಅಟ್ಲಾಸ್‌ಗಳನ್ನೆಲ್ಲ ಮಾರುವುದುತ್ತಮ. ಅವುಗಳನ್ನು ಮುಂದೆ ಜರ್ಮನಿ, ಜಪಾನ್, ಇಟಲಿ ದೇಶಗಳಲ್ಲಿ ಚರಿತ್ರೆ ಪಾಠಗಳಿಗಾಗಿ ಉಪಯೋಗಿಸುವರಂತೆ.

❖ ❖ ❖

೧೫೦ ಸಾರಿ ಗೀಚಬಹುದಾದ ಒಂದು ಬೆಂಕಿಕಡ್ಡಿಯನ್ನು ಅಮೆರಿಕಾದಲ್ಲಿ ಕಂಡುಹಿಡಿದಿರುವರಂತೆ.......ನಮ್ಮಲ್ಲಿ ತಯಾರಾದ ಕಡ್ಡಿ ಒಂದನ್ನು ಮೊನ್ನೆ ನಾನು ೨೦೦ ಸಾರಿ ಗೀಚಿದೆ!... ಉಹು ಹತ್ತಲಿಲ್ಲ!

❖ ❖ ❖

ಬಹುಪತ್ನೀ ವಿವಾಹವನ್ನು ನ್ಯಾಯವೆಂದು ಬೋಧಿಸುವ ಹಲವು ಮತಗಳನ್ನು ಯುದ್ಧಾನಂತರ ಯೂರೋಪಿನಲ್ಲಿ ಪ್ರಚಾರ ಮಾಡಬೇಕೆಂಬ ವಿಷಯವನ್ನು ಕ್ವಿಬೆಕ್‌ನಲ್ಲಿ ಚರ್ಚಿಸಲಾಯಿತಂತೆ.

❖ ❖ ❖

ಸೈನ್ಯ ಇಲಾಖೆಯವರು ನಡೆಸುತ್ತಿರುವ ಕೆಲವು ಆಸ್ಪತ್ರೆಗಳಲ್ಲಿ ರೋಗಿಗಳ ವಾರ್ಡಿನಲ್ಲಿ ಪ್ರಸಿದ್ಧ ಗಾಯಕರನ್ನು ಕರೆಸಿ ಹಾಡಿಸುತ್ತಿಹರಂತೆ.......

........ಗಾಯಗೊಂಡವರು ಆದಷ್ಟು ಬೇಗ ಯುದ್ಧರಂಗಕ್ಕೆ ತೆರಳಲು ಇದೇ ಒಳ್ಳೇ ಉಪಾಯ.

ಕಾಶೀಯಾತ್ರೆಗೆ ಎಷ್ಟು ಖರ್ಚಾಗುತ್ತದೆ, ಪುರೋಹಿತರೇ?
ರೈಲುಸ್ಟೇಷನ್ನಿನಲ್ಲಿ ವಿಚಾರಿಸಿ ಸ್ವಾಮಿ.

◆ ◆ ◆

“ಇದೊಂದು ದುರಂತ ನಾಟಕ! ಕಷ್ಟದಲ್ಲೇ ಮುಗಿಯುತ್ತದೆ”
ಯಾಕೆ? ಸಭಿಕರು ಕಲ್ಲುಬೀರಿ ಹಣವನ್ನು ಹಿಂದಕ್ಕೆ ಕೇಳಿದರೋ?

◆ ◆

ಸಾಮಾನ್ಯವಾಗಿ ಗಿಣಿ ಮೂಗಿನವರು ಜೀವನ ಸಂಗ್ರಾಮದಲ್ಲಿ ಜಯಪ್ರದರಾಗುತ್ತಾರೆ........ಇತರರ ಮೂಗನ್ನು ಜೀವನ ಸಂಗ್ರಾಮದಲ್ಲಿ ಯಾರೋ ಮುರಿದುಹಾಕಿದಾರೆ ಎಂದು ಸಾಮಾನ್ಯವಾಗಿ ತಿಳಿದುಕೊಳ್ಳಬಹುದು.

◆ ◆ ◆

ಕಿಸೆಯೊಳಗೆ ಕೈಹಾಕಿಕೊಂಡು ತಿರುಗಾಡುವುದು ತರುಣರ ದುರಭ್ಯಾಸ....
........ಹೌದು. ಆದರೆ, ಅವರು ಪಾಪ, ಕಿಸೆಯೊಳಗೆ ಇನ್ನೇನನ್ನು ತಾನೆ ಇಟ್ಟಾರು?

◆ ◆ ◆

“ಜಾಹೀರಾತುಗಳ ಆವಶ್ಯಕತೆಯನ್ನೂ ಅನುಕೂಲಗಳನ್ನೂ ನಮ್ಮವರು ಆಗಲೇ ಅರಿತಿದಾರೆ” (ಉಪನ್ಯಾಸ)........ಇಲ್ಲ! ಅರಿತಿದ್ದರೆ, ಪ್ರತಿನಿಧಿ ಸಭೆಯಲ್ಲಿ ತಲೆನೋವಿನ ಔಷಧಿಗಳನ್ನೇಕೆ ಪ್ರಕಟಿಸುತ್ತಿಲ್ಲ?

ಸಾ : ಪಕ್ಕದ ಮನೆಗೆ ಬಾಡಿಗೆ ಬಂದಿರುವವರು ಯಾರು?

ನೀ : ಯಾರೋ ಗೊತ್ತಿಲ್ಲ....ಆತ, ಆಕೆ ಇಬ್ಬರಿದ್ದಾರೆ.

ಸಾ : ಗಂಡ-ಹೆಂಡತಿ!

ನೀ : ಅಲ್ಲ ಅಂತ ತೋರುತ್ತೆ........ಎಂಟುದಿನವಾಯಿತು. ....ಇನ್ನೂ ಮಾರಾಮಾರೀನೇ ಕೇಳಿಸಲಿಲ್ಲ!

◆ ◆

ಡಾಕ್ಟರ್ : ಈ ಔಷಧಿ ಕುಡಿದಕೂಡಲೇ ಜ್ವರ ಕೊಂಚ ಹೆಚ್ಚುತ್ತೆ..........ಅದು ಒಳ್ಳೇದೇ!

ರೋಗಿ : ಹಾಗಾದರೆ ಔಷಧಿ ಬೇಡಿ........ನಿಮ್ಮ ಬಿಲ್ ಕೊಡಿ, ಸಾಕು

ಹೆಮೊ - ಶುಂಠೊ - ಸಾಲ್ಟ್

ಆರೂಕಾಲ್ ರೂಪಾಯಿ ಕೊಟ್ಟು ಮನೆಗೆ ತಂದೆ. ಪ್ಯಾಕೆಟ್ ಬಿಚ್ಚಿ ಸೀಸೆಯನ್ನು ನಿಧಾನವಾಗಿ ಹೊರಗೆಳೆದೆ. ಅರ್ಧ ಮುಕ್ಕಾಲು ಸೀಸೆ ತುಂಬ ಕೆಂಪು ಬಣ್ಣದ ಔಷಧಿ. ಕಡುಕೆಂಪು. ಹೆಪ್ಪುಗಟ್ಟಿದ ರಕ್ತದಂತೆ. ಯಾವುದೋ ಹೊಸ ದುರ್ವಾಸನೆ.

ಹೆಸರನ್ನೋದಿದೆ. ಹೀಮೋ: ರಕ್ತಕಣಗಳನ್ನು ಕೋಟಿಮಡಿಸುವ ಅಮೂಲ್ಯ ವಸ್ತು. ಸಾಕ್ಷಾತ್ ಮಿಂಚಿನ ರಸ. ಆಮೇಲೆ, ಶುಂಠೊ: ಅಗ್ನಿವರ್ಧಕ, ಜೀರ್ಣಕಾರಿ, ಆಮಶಂಕಾವಿಧ್ವಂಸಿನಿ, ಪುಷ್ಟಿದಾಯಿನಿ. ಕೊನೆಗೆ, ಸಾಲ್ಟೊ, ಅಲ್ಲ, ಸಾಲ್ಟ್: ಅಂದರೆ, ಲವಣ; ಅಂದರೆ ಏನು ಅಂತ ತಿಪ್ಪಾಭಟ್ಟರ ಮಗಳಿಗೂ ಗೊತ್ತು. ಲವಣ ಒಳ್ಳೇ ವಿರೇಚಕ, ಕಫಶಾಲಿನಿ, ವಾತವಿಧ್ವಂಸಿನಿ, ಚಿತ್ತಶುದ್ಧಿಕಾರಕ, ದೃಷ್ಟಿಮಾಪಕ. ಒಂದೊಂದೇ ಹೀಗಿರುವಾಗ ಮೂರೂ ಸೇರಿದರೆ ನನ್ನ ಸುತ್ತಳತೆ ಗತಿಯೇನು ಎಂಬ ಹೆದರಿಕೆ ಹತ್ತಿತು.

ಕೇವಲ ನೂರೇ ಆಣೆಗೆ, ನರವಿಲ್ಲದ ಈ ನಾರಾಯಣನನ್ನ ಗ್ರಾಮಸಿಂಹ ಮಾಡಬಲ್ಲ ಮಾಟದ ಮದ್ದನ್ನು ಮಾರುವ ಕಂಪನಿಯವರನ್ನು ಮನಸಾವಾಚಾ ವಂದಿಸಿದೆ.

ಕಾಯಾ?........ ಅದನ್ನ ನನ್ನ ಘಟಾನುಘಟವೇ ಮಾಡಲಿ, ಮುಂದೆ.

ಬಾಟ್ಲೀಪೇಲಿನ ಬಣ್ಣದ ಜಾಹೀರಾತನ್ನು ಓದಿದೆ. ಒಳಗಿನ ದ್ರಾವಕದಲ್ಲಿ ಕಬ್ಬಿಣ, ಹವಳ, ಅಲುಮನಿಯಂ, ಚಿನ್ನ, ಶಂಖ, ಸೀಸೆ, ತಾಮ್ರ ಮುಂತಾದ ಲೋಹಗಳ ಸಾರಸರ್ವಸ್ವಗಳು ಇವೆಯೆಂದು ತಿಳಿದುಕೊಂಡೆ. ಹಾಗೆಂತ ಪ್ರಿಂಟೇ ಮಾಡಿದ್ದ. ಓದಿದಕೂಡಲೇ ನನ್ನ ನರಗಳೆಲ್ಲವೂ ತಾಮ್ರದ ತಂತಿಗಳಾದವು. ಅವುಗಳ ಮೂಲಕ ಹೊಸ ಚೇತನದ ವಿದ್ಯುತ್‌ಶಕ್ತಿ ಹರಿಯಿತು. ತುಟಿಯಲ್ಲಿ ಹವಳ, ಬಾಯಲ್ಲಿ ಶಂಖ, ಬೆನ್ನೆಲುಬಿನಲ್ಲಿ ಕಬ್ಬಿಣ, ಹೃದಯದಲ್ಲಿ ಚಿನ್ನ, ಕಿವಿಯೊಳಗೆ ಸೀಸ, ಎಲ್ಲೆಲ್ಲೂ ಅಲುಮನಿಯಂ—ಹೀಗೆ ಲೋಹರಸಗಳು ಸಂಚರಿಸಿದುವು. ಜಾಹಿರಾತಿನಲ್ಲಿ ಮತ್ತೊಂದು ಅಂಶವೂ ಇತ್ತು. ಸಹಸ್ರಾರು ಮೂಟೆ ಶುಂಠಿಯನ್ನು ತರಿಸಿ ಶುಂಠತ್ವ ಕಡಿಮೆ ಇದ್ದದ್ದನ್ನೆಲ್ಲ ಆಚೆಗೆಸೆದು ಉಳಿದವುಗಳಿಂದಲೇ ಆ ಆರು ಔನ್ಸುಗಳನ್ನು ಮಾಡಿದ್ದರಂತೆ. ಪಾಪ, ನನ್ನಂಥ ನೂರಾಣೆಗಾರರ ಆಯುಷ್ಯವರ್ಧಕ್ಕಾಗಿ ಕಂಪನಿಯವರು ಪಟ್ಟಿರುವ ಕಷ್ಟನಷ್ಟಗಳಿಗಾಗಿ ನಾನು ಕನಿಕರಿಸಿದೆ........ಆಗ,........ಕುಂಠಿತವಾದ ನನ್ನ ನರಗಳೆಲ್ಲವೂ ಶುಂಠಿತವಾದವು. ಸಾಲ್ಟ್ ಎಂಬ ಮಾತನ್ನು ಮನನಮಾಡಿದಾಗ ನನ್ನಲ್ಲಿ ಒಮ್ಮೆಲೆ

ಪುನ್ಪುಸುವಯಿಸಿತು ನನ್ನ ನಾಡಿನಾಡಿಯಲ್ಲಿ ಹರಿದು ಉರಿದುಂಬಿಸಿದ ಈ ಪವಾಡದಪೆದುರು ನಾನು ಮೂಕನಾಗಿ ಕುಳಿತೆ.

ಸೀಸೆಯ ಬಿರಟೆಯನ್ನು ಹೊರಕ್ಕೆಳೆದು ನಾಲಿಗೆ ನೀಡಿ ಅದರ ತುದಿಗೆ ಒಂದು ತೊಟ್ಟು ಇಳಿಸಿ ರುಚಿನೋಡಲು ಯತ್ನಿಸಿದೆ. ಕೈ ನಡುಗಿತು. ನಾಲಿಗೆ ನುಲಿಯಿತು. ತುದಿ ತತ್ತರಿಸಿತು. ತೊಟ್ಟು ಕೆಳಗೆ ನೆಲದಮೇಲೆ ಬಿತ್ತು.

ಅಲ್ಲೇ ಹರಿದು ಹೋಗುತ್ತಿದ್ದ ಒಂದು ಇರುವೆ ಅದನ್ನು ನೆಕ್ಕಿತು ......
ಗೊದ್ದವಾಗಿ ಓಡಿಹೋಯಿತು! ಅದರಮೇಲೆ ಕೂತ ಒಂದು ನೊಣ ಗಿಡಗವಾಗಿ ಹಾರಿಹೋಯಿತು. ಬಿರಟೆ ಮುಟ್ಟಿದ ಬೆರಳನ್ನು ಸೊಳ್ಳೆಪರದೆಯಲ್ಲಿ ಒರಸಿದೆ. ಹುಲಿ ತೂರುವಷ್ಟು ಅಗಲವಾದುವು ಆ ತೂತುಗಳು

ನನಗೆ ದಿಗಿಲುಬಡಿಯಿತು ಸೀಸೆಯನ್ನು ದೂರದಲ್ಲಿರಿಸಿ ಒಂದು ಡಬ್ಬ ಮಗುಚಿ ಮುಚ್ಚಿದೆ. ನೆಟ್ಟಗೆ ಡಾಕ್ಟರ್ ಮನೆಗೆ ಹೋದೆ.

ಅವರ ಸಲಹೆಯಂತೆ ಈಗ ಹತ್ತು ದಿನಗಳಿಂದ ಬೆಳಿಗ್ಗೆ, ಮಧ್ಯಾಹ್ನ ಮತ್ತು ರಾತ್ರಿ ಊಟವಾದಮೇಲೆ ಒಂದೇ ಒಂದು ಸಾರಿ ಆ ಔಷಧಿಯ "ಲೇಬಲ್"ನ್ನು ನನಗೆ ನಾನೇ ಸದ್ದುಮಾಡದೆ ಓದುತ್ತಿದೇನೆ.

ಇವತ್ತು ಬೆಳಗ್ಗೆ ಗಿಾಮನಿಗೆ ಒಂದು ಕಾಗದ ಬರೆದಿದೇನೆ. ಆತನಿಂದ ಸರಿಯಾದ ಉತ್ತರ ಬರದಿದ್ದರೆ, ನೀವು ಯಾರಾದರೂ ಒಂದು ಪಟ್ಟು ನೋಡುತ್ತೀರೇನು?

ಪರೀಕ್ಷೆಗಳನ್ನು ನಡೆಸಲು ಕಾಗದದ ಅಭಾವ. ಆದ್ದರಿಂದ ಕಾರ್ಖಾನೆಯವರೇ ಎಲ್ಲಾ ಶಾಲೆಗಳಿಗೂ ಒಂದು ಸಲಹೆ ಕೊಟ್ಟಿರುವರಂತೆ. ಈಗಿನ ಪ್ರಶ್ನೆಗಳನ್ನು ಬಿಟ್ಟು, "ಕೆಳಗೆ ನಮೂದಿಸಿರುವ ಆರು ವಿಷಯಗಳ ಪೈಕಿ ನಾಲ್ಕನ್ನು ಕುರಿತು ನಿಮಗೆ ತಿಳಿದಿರುವ ಅಂಶಗಳನ್ನು ಬರೆಯಿರಿ" ಎಂಬ ಪ್ರಶ್ನೆಯನ್ನು ಕೊಡಿ ......ವಿಷಯ ಯಾವುದಾದರೂ ಆಗಲಿ ಕಾಗದ ಬೇಕಾಗಿರುವುದಿಲ್ಲ— ಎಂದು ಹೇಳಿದುವರಂತೆ.

✦ ✦ ✦

ಕಾಗದ ಬರೆದು ಟಪ್ಪಾಗೆ ಹಾಕಲು ಕಾಸಿಲ್ಲದೆಹೋದರೆ ತಲಪಬೇಕಾದವರ ವಿಳಾಸ ಬದಲಾಯಿಸಿ ಪೆಟ್ಟಿಗೆಯಲ್ಲಿ ಹಾಕಿಬಿಡಿ...... ....ಸ್ಟಾಂಪಿನ ಖರ್ಚು ಉಳಿಯುತ್ತದೆ.



" ಯಾತಕಯ್ಯಾ, ಈ ಸಿಗರೇಟ್ ಸೇದೊ ದುರಭ್ಯಾಸ, ಬಿಟ್ಟು ಬಿಡಬಾರದೆ ಅದನ್ನ "

" ಬಿಡೋದು ಸುಲಭ ಸ್ವಾಮಿ, ನಾನು ನಲವತ್ಸಾರೆ ಬಿಟ್ಟಿದ್ದೇನೆ "

ಭಾನುವಾರ ರಜಾ

ಅಯ್ಯೋ ಶುರುಮಾಡಿದ್ಲು "ಸ್ವಾಮಿ, ಸ್ವಾಮಿ" ಅಂತಾ ಇನ್ನೂ ಆರು ಗಂಟೆ ಹೊಡೆಯೋದಕ್ಕಿಲ್ಲ ಆಗ್ಲೆ ಬಂದ್ಲು ಕಸ ಗುಡಿಸುಕ್ಕೆ "ತಡಿಯೋ ಕೆಗಿತೀನಿ ಒಂದೇಉಸರಿಗೆ ಒದರಬೇಡ" ಭಾನುವಾರನಾದ್ರೂ ನಿಧಾನವಾಗಿ ಏಳೋಣ ಅಂದ್ರೆ

ಲೇ ಬಾಗಿಲು ಹಾಕಿಕೊಂಡು ಹೋಗಬಾರದೆ ? ಚಳಿಗಾಳಿ ಬೀಸುತ್ತಲ್ಲೇ ?
ಅಬ್ಬಬ್ಬಾ ಏನು ಛಳಿ, ಇವಳೇನೋ ಆರುಗಂಟೆಗೆ ಬಂದರೆ ನನ್ನನ್ನು ಯಾಕೆ ಗೋಳು ಹುಯ್ಯಬೇಕು, ಭಾನುವಾರ ಎಂಟುಗಂಟೆತನಕ ಮಲಗೋಣ ಅಂದ್ರೆ. ಪರವಾಗಿಲ್ಲ ಇನ್ನೂ ಏಳುಗಂಟೆ, ಇನ್ನೊಂದುಗಂಟೆ ರಗ್ಗೊದ್ದುಕೊಂಡು ಮಲಗೋಣ.

ಟರ್ ಟರ್....... ಅರೇ ಭಾನುವಾರ ಅನ್ನೋದನ್ನೇ ಮರೆತು ಅಲಾರಂ ಇಟ್ಟುಬಿಟ್ಟಿದ್ದೆ, ವಕ್ರಮುಂಡೇದು, ತಲೇಮೇಲೆ ಹೊಡೆದಹಾಗೆ ಎಬ್ಬಿಸುತ್ತೆ. ಬೇಗ ನಿಲ್ಲಿಸಿ ಇನ್ನೊಂದು ಅರ್ಧಗಂಟೆನಾದರೂ ಮಲಗೋಣ.

ಯಾರೋಅದು ಬಾಗಿಲ ತಟ್ಟೋದು, ಓ ಕ್ಷೌರದವನೇನೋ ? ಹೂಂ ತಡಿಯೋ, ಬಂದೇ, ಊಹೂ, ಬೇಡ ಮುಂದಿನ ಭಾನುವಾರ ಬಾ, ಈವತ್ತು ಬೇಡವೋ.

ಅಯ್ಯೋ ಒಂಭತ್ತು ಆಗಿಹೋಯ್ತು, ಇನ್ನೇನು ಮಲಗಿದರೂ ನಿದ್ರೆ ಬರಲ್ಲ, ಮಧ್ಯಾಹ್ನ ಮಲಗಿದರೆ ಆಯಿತು, ಬೇಗ ಮುಖ ತೊಳೆದುಕೊಂಡು ಅಣ್ಣಯ್ಯಪ್ಪನ ಹೋಟಲಿಗೆ ಹೋಗಿ ಎರಡುದೋಸೆ ಹಾಕಿಬರೋಣ.

"ಯಾರು ! ಹಲ್ಲೋ ! ಬನ್ನಿ ಗೋಪಾಲರಾವ್ ಇದೇನಿದು ಅಪರೂಪ ದರ್ಶನ, ಆರಾಮವಾಗಿ ಬಂದಿದ್ದೀರಿ ಓಹೋ ಭಾನುವಾರಅಂತಲೋ, ಎಲ್ಲಿಗೆ ? ಮಾರ್ನಿಂಗ್ ವಾಕ್‌ಗೆ, ಇಲ್ಲಪ್ಪಾ ದಯವಿಟ್ಟು ಕ್ಷಮಿಸಿ, ನಿನ್ನೆರಾತ್ರಿತಾನೇ ನೋಡಿದ್ದೆ—ನಿಮಗೆ ಹೊತ್ತಾಯಿತೇನೋ—ಹೊರಡ್ತೀರಾ, ಗುಡ್‌ಮಾರ್ನಿಂಗ್.

ಸದ್ಯ ಇವನ್ನ ಸಾಗಿಸಿದ್ದಾಯಿತು, ಈಗ ಹೋಟಲಿಗೆ ಹೋಗಿ ಅವರಿವರ ಕಾಟ ಇಲ್ಲದೆ ಎರಡುದೋಸೆ ಹಾಕಿ.

ಯಾರೋ ! ಓಹೋ ನೀನೇ. ಇವತ್ತೇ ಬರಬೇಕೆ, ಭಾನುವಾರ ಅಂತ ಬಂದೆಯಾ, ನಿನಗೆ ಯಾವವಾರ ಆದರೇನೋ ತಡೀ ಲೆಖ್ಖ ನೋಡ್ತೀನಿ.

ಎರಡು ಕರ್ಚೀಫ್ ಎಲ್ಲೋ, ಇದೇನೋ, ಅಂಗಿಗುಂಡಿ ಎಲ್ಲಾ ಮಾಯ,

ಈ ದುಪಟಿ ಏನೋ ಒಂದನ್ನೆರಡು ಮಾಡೋಪ್ರಯತ್ನ ? ಸರಿ, ಹದಿನಾಲ್ಕುಬಟ್ಟೆ-ದುಡ್ಡೆಲ್ಲಾ ಮುಂದಿನ ಒಗೇಗೆ ಕೊಡ್ತೇನೆ, ಸದ್ಯ ಈಗ ಹೊರಡು.

ಅಯ್ಯೋ ದೇವರೆ ! ಆಗಲೆ ಹನ್ನೆರಡುಗಂಟೆ, ಇನ್ನೆಲ್ಲಿ ದೋಸೆ, ಹೋಗಲಿ ಸ್ನಾನಮಾಡಿ ಊಟಕ್ಕೆ ಹೋಗಿಬಿಡೋಣ.

ಈ ತಣ್ಣೀರಿನಲ್ಲಿ ಹೇಗಪ್ಪಾ ಸ್ನಾನ ಮಾಡೋದು ನೀರು ಕಾಯಿಸಿ ಸ್ನಾನ ಮಾಡಬೇಕು, ಇವತ್ತು. ಹಾಳುಸೌದೆ ಹಸಿ, ಇದೇನು ಇಷ್ಟುಹೊಗೆ, ಹೇಗಾದರೂ ಈಒಲೆಗೆ ಬೆಂಕಿ ಹಾಕುತ್ತಿದ್ದಳೋ ನಾಕಾಣೆ. ಅದಕ್ಕೇ ತೌರುಮನೆಗೆ ಎದ್ದುಬಿಟ್ಟಳು ಅಂತ ಕಾಣುತ್ತೆ. ಬಾಗಿಲ ಮುಚ್ಚಿದರೆ ಹೊಗೆಎಲ್ಲಾ ಸೂರಿನಕಡೆಗೆ ಹೋಗುತ್ತೇನೋ ನೋಡೋಣ-ಇದೇನು ಕೆಮ್ಮಪ್ಪಾ, ಬಾಗಿಲ ಹಾಕಿದರೆ ಹೊಗೆಎಲ್ಲಾ ಮೇಲ್ಹೋಗೋದುಬಿಟ್ಟು ಎಲ್ಲಾ ನನ್ನಮೂಗಿಗೆ ಬರುತ್ತೆ. ಅಬ್ಬಾ, ಹೊರಗೆ ಬಂದರೆ ಎಷ್ಟುಹಿತ, ನೀರು ಆರಿದರೂ ಆರಲಿ ಹೊಗೆ ಹೋದಮೇಲೆ ಒಳಗೆ ಹೋಗಿ ಸ್ನಾನ ಮಾಡೋಣ.

ನೀರು ಕಾದೇಇಲ್ವೇ, ಬರೀ ಹೊಗೆಯಾಡಿ ಬೆಂಕಿ ಹತ್ತದೆಹೋಯಿತೆ, ಹೋಗಲಿ ಹಾಗೇ ಸ್ನಾನಮಾಡಿಬಿಡೋದು, ತಣ್ಣೀರು ಮೈಗೆ ತಂಪಂತೇ, ಸರಿ

ಅವರೇ ಒಂದುಗಂಟೆ ! ಬೇಗಹೋಗಿ ಊಟ ಮಾಡಬೇಕು, ಪಲ್ಯಇಲ್ಲ ಹಪ್ಪಳ ಮುಗೀತು ಅಂದುಬಿಡುತ್ತಾನೆ ಅಣ್ಣಯ್ಯಪ್ಪ.

"ಏನೋ ಪಾಣಿ, ಇನ್ನೂ ಸ್ವಲ್ಪ ಪಲ್ಯಹಾಕೋ" 'ಆಗ್ಹೋಯ್ತು ಸ್ವಾಮಿ, ಆಗಲೇ ಒಂದುವರೆಗಂಟೆ, ತಿಂಡಿಹೊತ್ತು ಸ್ವಾಮಿ' 'ಹೋಗಲಿ ತಿಂಡಿ ಏನು ಮಾಡಿದ್ದೀರಿಯೋ ಅದನ್ನೇ ಊಟಕ್ಕೆ ಬಡಿಸೋ' 'ಈಗತಾನೇ ಸಿದ್ಧಮಾಡುತ್ತಿದ್ದೇವೆ ಸ್ವಾಮಿ, ಇನ್ನೊಂದುಗಂಟೇಲಿ ಬಾಳೆಕಾಯಿಬೋಂಡ' 'ಇನ್ನೊಂದುಗಂಟೆ! ಹೋಗಲಿ ಬಿಡು, ಸಾಯಂಕಾಲ ಬಂದರಾಯಿತು' ಮಜ್ಜಿಗೆ ಅನ್ನ ಹೆಚ್ಚುಮಾಡಿದರಾಯ್ತು.

ಅಪ್ಪಾ, ಇಷ್ಟುಹೊತ್ತಾದರೂ ಊಟ ಮುಗಿಯಿತಲ್ಲ. ಇನ್ನುಹೋಗಿ, ಹಾಯಾಗಿ ಮಲಗ್ಬಿಡೋದು ಸಾಯಂಕಾಲ ಆರುಗಂಟೆತನಕ ನಂತರ ನೋಡೋಣ

ಏ ಏ ಏ ತಡಿಯಯ್ಯಾ, ಕದ ಹಾಗೆ ತಳ್ಳಬೇಡ, ಯುದ್ಧಕಾಲ, ಬಾಗಿಲೂ ಭದ್ರವಿಲ್ಲ ಮುರಿದುಹೋದೀತು, ಅಯ್ಯೋ ತಾವೇ ನಾನ್ಯಾರೋ ಅಂತಿದ್ದೆ ಬನ್ನಿ, ಬನ್ನಿ, ಇದೇನು ಮಟಮಟ ಮಧ್ಯಾಹ್ನ ನಡೆದೇ ಬಂದಿದ್ದೀರಿ—ಎಲ್ಲಾ ಚೆನ್ನಾಗಿದ್ದೀರಿತಾನೇ—ದುಡ್ಡು ಕೊಡಬೇಕು ಅಂದಿರಾ, ದುಡ್ಡೇ, ಯಾರು ಕಳುಹಿಸಿದ್ದು ಎಷ್ಟುರೂಪಾಯಿ ? ಪಾಪ ನೀವು ತೊಂದರೆ ತಗೋಬೇಕಾಯಿತಲ್ಲ.

ಆ ಎನೆಂದಿರಿ, ಸುಬ್ಬಣ್ಣನೋರಿಗೆ ಕೊಡಬೇಕೆ, ನಾನೇ ತಲುಪಿಸಬೇಕೆ ! ಅದಕ್ಕೇನು ಆಗಬಹುದು, ಇವತ್ತು ಸಾಯಂಕಾಲಾನೇ ಸಿಕ್ತಾನೆ, ಕೊಡ್ತೀನಿ. ಓಹೋ ! ಹೇಳ್ತೀನಿ ಅವರು ರೈಲಿಗೆ ಹೋಗಬೇಕಾಗಿತ್ತು ನನ್ನಕೈಲಿ ಕಳಸಿದ್ದು ಅಂತ—

ಅಪ್ಪಾ, ಆಗಲೇ ನಾಲ್ಕುಗಂಟೆಗೆಬಂತು ಇನ್ನೇನು ಮಾಡುವುದು.

ಓಹೋ, ಏನಯ್ಯಾ ಶಂಕರ್, ವಾಕಿಂಗ್ ಹೊರಟೆಯಾ, ಎತ್ತಲಾಕಡೆ ಲಾಲ್‌ಬಾಗ್‌ಕಡೆಗೆ? ದಿನಬೆಳಗಾದರೆ ಆಕಡೆನೇ ಬಸ್‌ನಲ್ಲಿ ಹೋಗಿ ಹೋಗಿ ಆರಸ್ತೆ ಕಂಡ್ರೆ ಒದ್ದುಬಿಡೋಣ ಅನ್ನಿಸುತ್ತೆ, ನಾನು ಆಕಡೆ ಬರುಲ್ಲಪ್ಪ ನೀನು ಹೋಗು, ನಾ ಮನೇಲೇ ಇರುತ್ತೇನೆ.

ಈಗಲಾದರೂ ಈ Sunday Times ಓದೋಣ ಎಲ್ಲರಸುದ್ದೀನೂ ಇರುತ್ತೆ. ಇವತ್ತು ಏಳುಗಂಟೆಗೇ ರಾತ್ರೀ ಊಟಮಾಡಿ, ಎಂಟಕ್ಕೇ ಮಲಗಿ ಬಿಡುತ್ತೇನೆ.

ಏನೋ, ಇನ್ನೂ ಅಡಿಗೆ ಆಗಿಲ್ವೆ, ಏಳಾಯ್ತಲ್ಲೋ ? ಇದೇನು ಜೈನರ/ಹೋಟಲಲ್ಲಾ ಅಂತಿಯಾ, ಎಂಟಕ್ಕೆ ಬಂದರೆ ಹುಳಿ ಆಗಿಹೋಯ್ತು ಅಂತಿ, ಏಳಕ್ಕೆ ಅಡಿಗೇನೆ ಇಲ್ಲಾ ಅಂತಿ, ಹೋಗಲಿ, ಬೇಗಬೇಗ ಮಾಡು.

ಈ ಹಾಳು ಹೋಟಲಿನಲ್ಲಿ ಹೋದವರ್ಷದ ಪೇಪರೇ—ಓಹೋ ಇದರಲ್ಲಿ ನೋಡಿ, ಹಿಟ್ಲರೂ, ಸ್ಟಾಲಿನ್ನೂ ಒಬ್ಬರನೊಬ್ಬರು ತಬ್ಬಿಕೊಳ್ಳೋ ಬೊಂಬೆ, ವಹವ್ವಾ, ಅವರು ಇವತ್ತು ಈ ಬೊಂಬೆ ನೋಡಬಾರದೇ ? ಈಹಾಳೆ ನೋಡಿದ್ರಾ, ರಷ್ಯನರನ್ನು ಹೇಗೆ ಬಯ್ದಿದ್ದಾರೆ, ಫಿನ್‌ಲೆಂಡನ್ನ ಹೇಗೆ ಹೊಗಳಿದ್ದಾರೆ.—ಈ ಚಿತ್ರ ನೋಡಿದಿರಾ ರಷ್ಯನ್ ತೋಳಾ, ಫಿನ್‌ಲೆಂಡ್ ಕುರಿಯನ್ನು ಅಟ್ಟಿಸುತ್ತಾ ಇದೆ. ಕುರಿಗೆ ಬೆಂಬಲ ಕೊಡುತ್ತಿದ್ದಾರೆ ಇವರು ! ಆಹಾ ! ಏನುಜನ !

ಅಡಿಗೆ ಆಯ್ತೇನೋ ? ಸರಿ, ಇದೇನೋ ಸಾರಿಗೆಲ್ಲಾ ಉಪ್ಪುಹಾಕಿದ್ದೀ, ಗಮಗಮಅಂತಿದೆ, ಬಾಯಿಗಿಡುವಹಾಗಿಲ್ಲ ಇದೇನು ಹುಳಿಯೋ, ಸೌದೆಚೂರು ಚೂರೇ ಹಾಕಿದ್ದಿ? ಯಾವಪಲ್ಯ ಇದು ಬಾಳೆಎಲೇದೆ, ಎಂಜಲೆಲೇದಲ್ಲತಾನೇ ?

ಅಪ್ಪಾ, ಇನ್ನುಬೇಗ ಮಲಗೋಣ ಆಗಲೇ ಒಂಭತ್ತಾಯ್ತು. ಇದೇನು ದಿಂಬಿನಕೆಳಗೆ? ಅಯ್ಯೋ ಚೇಳು, ಅರರೇ! ಬಾಗಿಲಕಡೆಗೆ ಓಡಿತು, ಬೂಡ್ಸುಹೊಡೆ ತಾನೂ ತಪ್ಪಿಸಿಕೊಂಡಿತು ಟ್ರಂಕಿನಕೆಳಗೆ ಓಡಿತಲ್ಲಪ್ಪಾ, ಅಪ್ಪಾ, ಈಗ ಸಿಕ್ಕಿತು ಅಯ್ಯೋ ಆರುಅಂಗುಲ ಇದೆಯಲ್ಲಪ್ಪಾ ಇದು ಕಡಿದಿದ್ದರೆ ನನ್ನಗತಿಏನೂ ಚೇಳು ಸಿಕಾರಿಗೆ ಇಷ್ಟುಪೈ ಬೆವರುತ್ತಲ್ಲಾ ! ಹೋಗಲಿ ಚನ್ನಾಗಿ ನಿದ್ರೆಬರುತ್ತೆ.

ಅಯ್ಯೋ ದೇವರೇ ! ಆಗಲೇ ಹನ್ನೊಂದು ಹೊಡೀತು, ಇನ್ನು ಬೆಳಗ್ಗೆ ಏಳ ಬೇಕಲ್ಲಪ್ಪಾ, ಐದುಗಂಟೆಗೆ ಇಲ್ಲದಿದ್ದರೆ ಫಾಕ್ಟರಿಬಸ್ಸು ಹೊರಟುಹೋಗುತ್ತಲ್ಲಪ್ಪಾ.
ಭಾನುವಾರ ಅಂದರೆ, ರಜಕ್ಕೂ ರಜಾವಲ್ಲಪ್ಪಾ.

ಕಿಟ್ಟಣ್ಣ.

ನವೀನ ಗಾದೆಗಳು

ಕೇಳಿದವರಿಗೆ ಪಾಕೀಸ್ಥಾನ; ಸುಮ್ಮನಿದ್ದವರಿಗೆ ಬಾಕೀಸ್ಥಾನ

ಜಿನ್ನಾ ಗೆದ್ದರೂ ಒಂದು ವರಿಸೆ; ಗಾಂಧಿ ಬಿದ್ದರೂ ಒಂದು ವರಿಸೆ

ಒಲ್ಲದ ಭಂಡರಿಗೆ ಕೊಸರಲ್ಲೂ ವೈಸಾಟಿ

ಹೋಗು ಅನ್ನಲಾರದೆ, ತಕೊಂಡು ಹೋಗು, ಅನ್ನೋದೇ?

ಕಂಡದ್ದನ್ನು ಹೇಳಿದರೆ, ಕೆಂಡದಂತಹ ಸುದ್ದಿ ಆಯಿತು

ಕೊಟ್ಟಿದ್ದು ಜಿನ್ನನಿಗೆ; ಬಚ್ಚಿಟ್ಟಿದ್ದೂ ಜಿನ್ನನಿಗೆ

ಗಾಂಧಿ ವರ ಕೊಟ್ಟರೂ ಮೂಂಜಿ ಕೊಡೋಲ್ಲವಂತೆ

ಹುಟ್ಟುತ್ತಾ ಅಣ್ಣತಮ್ಮ! ಬೆಳೆಯುತ್ತಾ ಕರ್ಣ, ಅರ್ಜುನ

ಅಡ್ಡಗೋಡೆ ಕಟ್ಟಿದರೆ ಆಕಾಶ ಬೇರೆಯಾಗುತ್ತದೆಯೆ?

ಥಾನುಂಟೋ, ಮೂರು ಮೊಳವುಂಟೋ?

—o—

ನಿಮ್ಮ ಮನೆ ಪಿಟೀಲು ರಿಪೇರಿ ಮಾಡುತ್ತೇನೆ ತಾಯಿ, ಕೊಡಿ.
ಯಾಕೋ! ಯಾರು ಹೇಳಿದರು ನಿನಗೆ?
ರಾಯರು, ತಾಯಿ?
ಯಾವ ರಾಯರೋ?
ಪಕ್ಕದಮನೆ ರಾಯರು, ತಾಯಿ!

✦ ✦ ✦

"ಜೋಬಲ್ಲಿ ಕಾಸಿಟ್ಟರೆ ಹೊಲಿಗೆ ಕಿತ್ತುಹೋಗುತ್ತೆ" ಎಂದು ಜ್ಯೋತಿಷ್ಯರು ಹೇಳುತ್ತಾರೆ...........ಸೆಕ್ರಿಟೆರಿಯೇಟ್‌ನವರ ಕೋಟುಗಳು ಸೈಸಾಗಿರುವುದರ ಕಾರಣ ಈಗ ಗೊತ್ತಾಯಿತು.

" ಸೆನ್ಸಾರ್ ಸುಧಾರಣೆಯ ಸಹಕಾರಗಳು "

೧

ಮಗಳ ಮದುವೆಯ ಆಹ್ವಾನ ಪತ್ರಿಕೆಗಳನ್ನು ಲಕ್ಕೋಟಿಗೆ ಹಾಕಿ ವಿಳಾಸ ಬರೆಯುತ್ತಿದ್ದರು, ಮಾಧವರಾಯರು, ಕಮಲಮ್ಮನವರು ಲಕ್ಕೋಟಿಗೆ ಗೋಂದು ಹಚ್ಚಿ, ನಾಲ್ಕೂ ಮೂಲೆಗಳಿಗೆ ಕುಂಕುಮ ಹಚ್ಚುತ್ತಿದ್ದರು

" ಏನೂ ಅಂದ್ರೆ, ಈ ಕಾಲದಲ್ಲಿ ಕಾರ್ಡಿನಮೇಲೆ ಅಚ್ಚುಹಾಕಿಸಿದ್ದರೆ, ಕವರಿನಹಣ ಮಿಗೋದು, ಒಂಭತ್ತೇಕಾಸಿನಸ್ಟಾಂಪು ಹಾಕಬಹುದಾಗಿತ್ತು, ಹೋಗಲಿ ಅಂದರೆ, ಈ ಕವರನ್ನೇ ಅಂಟಿಸದೆ ಹಾಗೇ ಹಾಕಿದರೆ ಒಂಭತ್ತೇ ಕಾಸಿನಲ್ಲಿ ಮುಗಿಯುತ್ತೆ, ಇದನ್ನೇ ಅಂಟಿಸಿ ಇನ್ನೊಂಭತ್ತುಕಾಸು ಯಾಕೆ ಕಳೆಯುತ್ತೀರಿ ? "

" ಅಯ್ಯೋ ಇದರ ಉಪಯೋಗ ನಿನಗೇನುಗೊತ್ತು, ಇದರಿಂದೆಲ್ಲಾ ಇವತ್ತು ಎಷ್ಟು ಖರ್ಚಾಗುತ್ತೆ, ತುದಾ ಐವತ್ತು ರೂಪಾಯಿ ಆಗಬಹುದು. ಆದರೆ ನೋಡು, ಕಾರ್ಡು ಹಾಕಿದರೆ ಸಮಯಕ್ಕೆ ಸರಿಯಾಗಿ ತಲಪುತ್ತೆ, ಎಲ್ಲರೂ ಮದುವೆಗೆ ಬಂದುಬಿಡ್ತಾರೆ, ಬಂದವರು ಹೋದವರಿಗೆಲ್ಲಾ ಔತಣ ಉಡುಗೊರೆ ಆದರೆ ಈ ಅಂಟಿಸಿದ ಕವರು ಹಾಕಿದರೆ, ಇದು 'ಸೆನ್ಸಾರ್' ಆಫೀಸಿಗೆ ಹೋಗಬೇಕು ಅವರು ಇದನ್ನು ಒಡೆದು ನೋಡಿ ತಿರುಗಿ ಅಂಟಿಸಿ ಕಳಿಸುವಹೊತ್ತಿಗೆ ಸುಮಾರು ಒಂದುವಾರ, ಆವೇಳೆಗೆ ಮದುವೆ ಮುಗಿದುಹೋಗಿರುತ್ತೆ. ಎಷ್ಟು ಅನುಕೂಲ ನೋಡು ".

" ಹೌದಲ್ಲಾ ಅಂದ್ರೆ, ಇದು ತೋಚಲೇಇಲ್ಲ ನನಗೆ "

೨

ಸೆನ್ಸಾರ್ ಕಛೇರಿಯ ಅಧಿಕಾರಿಗಳಿಗೆ, ರಘುನಾಥನ ಅಹವಾಲು,

ಸ್ವಾಮಿಾ,

ಕಂಡವರ ಕಾಗದ ಕದ್ದು ಓದುವುದೆಂದರೆ ನನಗೆ ಬಲುಇಷ್ಟ, ಎಷ್ಟು ಮೋಡಿಯಾದರೂ ಓದುತ್ತೇನೆ, ಎಷ್ಟುಹಾಳೆ ಇದ್ದರೂ ಬೇಸರಗೊಳ್ಳುವುದಿಲ್ಲ. ಹಾಗಾಗಿ ನಿಮ್ಮ ಕಛೇರಿಯಲ್ಲಿ ಕೆಲಸ ಮಾಡಲು ನನಗೆ ಸ್ವಭಾವಿಕವಾದ ಅರ್ಹತೆ ಇದೆ. ನಿಮ್ಮ ಕಛೇರಿಯಲ್ಲಿ ಕೆಲಸ ಒಂದು ಖಾಲಿ ಇದೆಯೆಂದು ಕೇಳಿದೆ ದಯವಿಟ್ಟು ನನಗೆ ಕೆಲಸ ಮಾಡಿಸಿಕೊಟ್ಟರೆ, ತೋಳ ಕುರಿ ಕಾದಹಾಗೆ, ಸಂಬಳವಿಲ್ಲದೇ ಕೆಲಸ ಮಾಡುತ್ತೇನೆ.

ನನ್ನ ಇಷ್ಟಾರ್ಥವನ್ನು ಈಡೇರಿಸುವರೆಂದು ನಂಬುವ, ತಮ್ಮ ಪತ್ರವನ್ನೇ ಎದುರು ನೋಡುತ್ತಿರುವ.

ನಿಮ್ಮ
ರಘುನಾಥ.

ಚಿ|| ಅಳಿಯಂದಿರಿಗೆ, ಸವಿನಯನುಡಿ, ಆಗಿಂದಾಗ್ಗೆ ನಿಮ್ಮ ಕ್ಷೇಮಸಮಾಚಾರವನ್ನೂ ತಿಳಿಸಬೇಕೆಂದು ಬಿನ್ನಹ.

ಈ ಸೆನ್ಸಾರ್ ಸೌಕರ್ಯ ಉಂಟಾದಾಗಿನಿಂದ, ನಮ್ಮ ಅನಸೂಯೆಯ ಪಾಡು ಅನಸೂಯವಾಗಿದೆ. ತನಗೆ ಎದೆಯಲ್ಲಿರುವುದನ್ನೆಲ್ಲಾ ಬಿಚ್ಚಿ ಹೇಳಿ ಬರೆಯಲು ಹೆದರುತ್ತಾಳೆ. ಕಂಡವರಕೈಗೆಲ್ಲಾ ಕಾಗದ ಹೋಗುತ್ತಲ್ಲಾ' ಎಂದು. ನೀವೂ ಹಾಗೆಯೇ ಲಘು ಕಾಗದಗಳನ್ನು ಆದೇಕಾರಣ ಬರೆಯುತ್ತೀರಿ ಎಂದು ಕಾಣುತ್ತೆ. ಆದರೆ, ನಿಮಗೆ ಅವಳಮೇಲೆ ಕೋಪ ಬಂದಿದೆಯೇನೋ ಅದಕ್ಕಾಗಿ ಹೀಗೆ ಎರಡೇಪಂಗ್ತಿ ಸಮರಸುದ್ದಿ ಪ್ರಕಟಿಸಿದಹಾಗೆ ಬರೆಯುತ್ತೀರಿ ಎಂದು ಅನುಮಾನ ತಲೆದೋರುತ್ತಿದೆ. ಹೀಗಾಗಿ ಹಗಲೂ ರಾತ್ರಿ ವ್ಯಾಕುಲಪೀಡಿತಳಾಗಿದ್ದಾಳೆ.

ದಯವಿಟ್ಟು ಪ್ರತಿವಾರಾಂತ್ಯವೂ ಇಲ್ಲಿಗೆ ಬಂದು ಎರಡು ದಿನಗಳಿದ್ದುಹೋಗಿ. ಯುದ್ಧ ಮುಗಿಯುವತನಕ, ವ್ಯಾಸಂಗ ಮಲ್ಲಿಗೇ ಸಾಗಲಿ,

ಶುಭಾಶಯಗಳು,
ಮಾವನವರು.

೪

ಪೋಸ್ಟ್ ! ಪೋಸ್ಟ್ !

"ಲೇ ! ಶಾರದೆ, ನಿನ್ನ ತಂಗೀಗೆ ಗಂಡುಮಗು ಹುಟ್ಟಿದೆಯಂತೆ ಸಹಾಯಕ್ಕೆ ನಿನ್ನನ್ನು ಕಳಿಸಬೇಕು ಎಂದು ನಿಮ್ಮತಂದೆ ಬರೆದಿದ್ದಾರೆ. ನಿಮ್ಮತಾಯಿ ಒಳಗೆಲಸ ನೋಡಿಕೊಳ್ಳುವುದರಲ್ಲೆ ಸುಸ್ತಾಗುತ್ತಾರಂತೆ. ಸುತ್ತುಗೆಲಸಕ್ಕೆ ನೀನು ಹೋಗಬೇಕಂತೆ."

"ಹಾಗೇನು ! ಎಂಥಾಮಗುವಂತೆ, ಯಾವತ್ತು ಹುಟ್ಟಿತಂತೆ ?"

"ನೋಡೇ, ಎಂಥಾಮಗು ಅದನ್ನೇ ಬರೆದಿಲ್ಲ, ಮುಖ್ಯ ಗಂಡಸರ ಕಾಗದ, ಗಂಡಾಂತರ ತಪ್ಪಿದ್ದು ಒಂದು, ಗಂಡು ಆದರೇನು ಹೆಣ್ಣಾದರೇನು ? ಆದರೆ, ಹುಟ್ಟಿದ ತಾರೀಖು ಹನ್ನೊಂದು ಎಂದು ಬರೆದಿದ್ದಾರೆ, ಅದೇದಿನವೇ ಕಾಗದ ಬರೆದಿದ್ದಾರೆ."

"ಮತ್ತೆ ಇವತ್ತು ಆಗಲೇ, ಇಪ್ಪತ್ತುನಾಲ್ಕು ಅದುಂಟಾಕೆ ಕಾಗದ ಇಷ್ಟು ವಿಳಂಬಾ, ನೂರ್ನೂರುಮೈಲಿ ಕಾಗದ ಬರೋಕ್ಕೆ ಹದಿಮೂರು ದಿವಸಾನೇ ?"

"ಈಗ ಕಾಗದಗಳನ್ನೆಲ್ಲಾ ಸೆನ್ಸಾರ್ ಮಾಡುತ್ತಾರೆಪಹೇ, ಅದಕ್ಕೇ ಕಾಡಿನಲ್ಲಿ ಕಾಗದ ಬರೆಯಿರಿ ಅನ್ನೋದು ಹೋಗಲಿ ಬಿಡು ನನಗೆ ಚಿಕ್ಕಿಯದೇ

ಆಯಿತು. ಈಗ ನೀರೂ ಆಗಿಹೋಗಿರುತ್ತೆ, ಇನ್ನು ಒಳಗೆಸಲ, ಹೊರಗೆಲಸ ಏನೂ ಇಲ್ಲ ನೀನು ಹೋಗಬೇಕಾಗಿಲ್ಲ. ನನಗೂ ಹೋಟಲ ಊಟ ತಪ್ಪಿತು ಮುಖ್ಯ ಸೆನ್ಸರಿನಿಂದ ಒಳ್ಳೆಯದೇ ಅನ್ನು."

"ನಿಮಗೂ ಹಾಗೇ ಆಗಬೇಕು, ಆಗ ಸೆನ್ಸರನ್ನು ಹೊಗಳುತ್ತೀರಾ ನೋಡುತ್ತೇನೆ" ಎಂದೆಚ್ಚರಿಸಿದಳು.

ಶ್ರೀಮತಿ ಜಯಲಕ್ಷ್ಮೀ, ಆರ್.
ಶ್ರೀನಿವಾಸನ್.



ಕ್ಷೌರಿಕ (ತನ್ನ ಜೀವನಚರಿತ್ರೆಯನ್ನು ಹೇಳುತ್ತಾ)

"............ಆಮೇಲೆ ಬಹಳ ಕಷ್ಟಪಟ್ಟು ಒಂದು ಪಾರ್ಕಿನಲ್ಲಿ ಗಿಡ ಕತ್ತರಿಸುವ ಕೆಲಸ ಸಿಕ್ಕಿತು ಸ್ವಾಮಿ.....................".

ಪ್ರ. ಪ್ರ. ಸಭೆ

"ರೈತರು ಬೆಳೆಯುವ ಆಹಾರದ ಬಹುಭಾಗವನ್ನು ಕೋತಿಗಳು ಕಾಡು ಹಂದಿಗಳು ಕರಡಿಗಳು ಮುಂತಾದ ಕಾಡು ಪ್ರಾಣಿಗಳು ತಿಂದು ಹಾಳುಮಾಡುತ್ತಿವೆ. ಅವುಗಳ ಹಾವಳಿಯನ್ನು ತಪ್ಪಿಸಬೇಕು".... ಇನ್ನು ಮೇಲಾದರೂ ಲಂಚಕೋರರ ಕೈ ಶುದ್ಧವಾಗುತ್ತೋ, ನೋಡಬೇಕು.

"10,000 ಕ್ಕೆ ಮೇಲ್ಪಟ್ಟ ಜನಸಂಖ್ಯೆಯಿರುವ ಕಸಬೆಗಳಲ್ಲಿ ಹೆಂಗೆ ಆಸ್ಪತ್ರೆಗಳನ್ನು ಸ್ಥಾಪಿಸಬೇಕು"...........ಕಡಮೆ ಜನ ಇರುವ ಕಸಬೆಗಳಲ್ಲಿ ಸ್ಥಾಪಿಸಿದರೆ, ಅವೂ 10 ಸಾವಿರಕ್ಕೆ ಬರುತ್ತೆ.

"ನಮ್ಮ ದೇಶದ ರೈತರು ಮುಖ್ಯವಾಗಿ ಬೆಳೆಯತಕ್ಕ ಭತ್ತ ಮತ್ತು ಬೆಲ್ಲದ ಧಾರಣೆ..........." ಹಾಗಾದರಿನ್ನು ಕಬ್ಬನ್ನು ಬೆಳೆಯುವುದೇತಕ್ಕೆ ?

"ಶಿವಮೊಗ್ಗ ಕಾಲೇಜಿಗೆ ಕಡೂರಿಂದಲೂ ವಿದ್ಯಾರ್ಥಿಗಳು ಹೋಗಬೇಕೆಂಬ ನಿರ್ಬಂಧವನ್ನು ತೆಗೆದುಹಾಕಬೇಕು"........ಯಾಕೆ ? ಶಿವಮೊಗ್ಗಿಯಿಂದಲೇ ಆ ಕಾಲೇಜಿಗೆ ವಿದ್ಯಾರ್ಥಿಗಳು ಹೋಗಿ ಬರುತ್ತಿಲ್ಲವೆ ?

"ವಿದ್ಯಾರ್ಥಿನಿಲಯಗಳಿಗೆ ಅಚ್ಚೇರು ರೇಷನ್ ಭತ್ಯವನ್ನು ಕೊಡಬೇಕು" .... ಹಾಗಾದರೆ, ಇನ್ನೂ ನೂರಾರು ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಬೇಕು.

"ಉಪಾಧ್ಯಾಯರುಗಳು, ಪೋಲೀಸಿನವರು. ಗುಮಾಸ್ತರು, ಝಾಡಮಾಲಿಗಳು — ಮುಂತಾದ ಬಡ ನೌಕರರಿಗೆ..........." (ಅಧಿಕೃತ ಪ್ರಕಟಣೆಯಿಂದ)....... ಪಾಪ ! ಪಾಪ !

ನಗೆಗಾರರು

—0—

೧

ಸಿಹಿನುಡಿಯು ನಗೆಗುಡಿಯ
ಕಟ್ಟುವರು ನಾವು !
ಜಂಭಿಗರ ಬಿಗಿತುಟಿಯ
ಬಿಚ್ಚುವರು ನಾವು

೨

ತಾರೆ ಮರಿಮಿಂಚುಗಳ
ತಂಪು ಬೆಳದಿಂಗಳಿನ
ಒಳಗುಟ್ಟುಗಳು, ನಾವು !
ಪಟ್ಟುಗಳು ನಾವು !
ಪೊಡವಿಯನು ಗಲಿರೆನಿಪ
ಹುಚ್ಚುಗಳು ನಾವು !

೩

ಸೊನ್ನೆಯಲಿ ಚೆಕ್ಕುಗಳ
ಕುಕ್ಕುವರು ನಾವು !
ಸಾಲದಲಿ ಶಾಲ್ಯಾನ್ನ
ಮುಕ್ಕುವರು, ನಾವು
ನಿಮ್ಮ ಕೊಳಕು ಥಳಕು
ನಮ್ಮ ಇಂದಿನ ಅಣಕು !
ನಿಮ್ಮ ಇಂದಿನ ಹುಚ್ಚು
ನಮ್ಮೆಲ್ಲರಿಚ್ಚೆ !
ನಮ್ಮುಸಿರೊಳಿಡಿನೆಚ್ಚು ,
ನಾವಿನಿಯಚುಚ್ಚು !

೪

ಹಬ್ಬಿಗರು, ಹಾಸ್ಯೇಂದ್ರ
"ಜಾಲಿ" ಗರು, ನಾವು !
ನಮ್ಮ ಮಿದು ಮುಲಾಮಿನಿಂ
ತೊಲಗುವುದು ನೋವು !
ನಗೆ ಮರಳಿ ಮಿನುಗುವುದು
ಗೊಳ್ಗರೆವ ಮುಸುಡಿ !

ಇನ್ನೊಮ್ಮೆ ನೆಗೆಯುವುದು
ನರಕುರಿಯ ಮರಿಯು !
ಓರೆಗಣ್ಣುಗಳನ್ನೆ
ಬೀರುವೆವು ನಾವು !
ಅಸ್ಪೃತರ ವಕ್ರತೆಯೆ
ದೃಷ್ಟಿಪಥವೆಮಗೆ !
ಹುಳಿಮೋರೆಗೆಮ್ಮುಸಿರೆ
ಆಲ್ಕಲಿಯು, ಕಣಾ !
ನಮ್ಮ ಲೇಖನಿಗಿಂತ
ಚಾವಟಿಯು ಕಾಣೆ !
ಬಿಗುಮಾನ ಬಾಗುವುದು !
ಜರಿಪೇಟ ಜಾರುವುದು !
ಟೊಳ್ಳು ಬಯಲಾಗುವುದು,
ಘೊಳ್ಳೆಂಬ ಸದ್ದಿನಲಿ !
ಹಲ್ಸಾಲೆ ಲೇಖನಿಯು
ನಗೆಯ ಮಸಿಯು !

೫

ಹೂವುಗಳ ಹೊಡೆಯಲ್ಲಿ
ಪರಿಮಳವು ನಾವು !
ಹಾವುಗಳ ಹೆಡೆಯಲ್ಲಿ
ರತ್ನಗಳು ನಾವು !
ಹೆಂಗಳಮೊಗದೊಳಗೆ
ಮುಗುಳುನಗೆ ನಾವು !
ರುದ್ರಾಗ್ನಿ ಅತ್ತೆಯರ
ನಟನೆಯುಲಿ ನಾವು !

೬

ಸಿಹಿನುಡಿಯ ನಗೆಗುಡಿಯ
ಕಟ್ಟುವರು ನಾವು !
ಜಂಭಿಗರ ಬಿಗಿತುಟಿಯ
ಬಿಚ್ಚುವರು ನಾವು !
ಪೊಡವಿಯನು ಗಲಿರೆನಿಪ
ಹುಚ್ಚುಗಳು ನಾವು !

(ಕುವೆಂಪುರವರ "ಕಬ್ಬಿಗರು" ಕವನದ ತರಲಾನುವಾದ)

— ಪ. ರಾಜ.

ಮದ್ರಾಸಿನಲ್ಲಿ ಗೋರವಂಜೀ

[ನಮ್ಮ ಸ್ವಂತ ಪಾದ್ರೀಕಾರರಿಂದ]

(ಎರಡನೆಯ ಡೋಸು)

ಮೊನ್ನೆ ಹಾಗೇ ದಾರಿಯಲ್ಲಿ ನಡೆದುಹೋಗುತ್ತಾ ಲಾರ್ಡ್ ವೆಲ್ಲಿಂಗ್ಟನ್‌ರವರನ್ನು ಎಡವಿ ಮುಗ್ಗರಿಸಿದೆ. ಇಲ್ಲಿ ದೊಡ್ಡದೊಡ್ಡವರನ್ನು ಎಡವಿ ಮುಗ್ಗರಿಸುವುದೇನೂ ಹೆಚ್ಚಲ್ಲ. ಬೇಕಾದರೆ ನಮ್ಮನ್ನಾಳಿದ ಚಕ್ರವರ್ತಿ ಸಾರ್ವಭೌಮರುಗಳನ್ನು, ವೈಸ್‌ರಾಯಿಗಳನ್ನು, ಗೌರ್ನರುಗಳನ್ನು—ಇನ್ನೂ ದೊಡ್ಡದೊಡ್ಡ ಜಡ್ಜಿಗಳು ಇತ್ಯಾದಿ—ಯಾರನ್ನಾದರೂ, ಎಷ್ಟುಬಾರಿಯಾದರೂ ಎಡವಬಹುದು. ಏಕೆಂದರೆ ನೀವು ನಡೆದುಹೋಗುವ ದಾರಿಗಡ್ಡವಾಗಿಯೇ ಒಬ್ಬೊಬ್ಬರ ಶಿಲಾಪ್ರತಿಮೆಯೂ ಇದೆ. ಬಹಳ ಜನಗಳ ಅಭಿಪ್ರಾಯ ಪ್ರತಿ ಪ್ರತಿಮೆಯಲ್ಲೂ ಆಯಾ ಮಹಾನುಭಾವರುಗಳ ಜೀವಕಳೆಯು ಪೂರ್ತಿಯಾಗಿ ತುಂಬಿದೆಯೆಂದೇ. ಅಂದರೆ ಪ್ರತಿಮೆಗೂ ಅವರಿದ್ದದ್ದಕ್ಕೂ ಎಳ್ಳಷ್ಟೂ ವ್ಯತ್ಯಾಸವಿಲ್ಲವೆಂದರ್ಥ.

ಹಾಗೆಯೇ........ಭಾಗವತರ ಸಂಗೀತಕ್ಕೆ ಹೋದೆ. ಹೋದೆ ಅಂದರೆ ಯಾರೋ ಸ್ನೇಹಿತರು ಎಳಕೊಂಡು ಹೋದರು. ಕಚೇರಿಯೇನೋ ಚೆನ್ನಾಗಿತ್ತು. ಮಧ್ಯದಲ್ಲಿ ಭಾಗವತರು, ಅವರ ಪಕ್ಕವಾದ್ಯದವರು ತಮ್ಮ ಕಚೇರಿಯನ್ನು ನಿಲ್ಲಿಸಿ ಸಭಿಕರಿಗೆ ಬಿಡಬೇಕಾಯಿತು. ಏಕೆಂದರೆ, ಬರಬರುತ್ತ ನೆರೆದಿದ್ದ ಜನರಲ್ಲಿ ಕೆಲವರು ಕಂಠದಲ್ಲಿಯೂ, ಕೆಲವರು ಮೂಗಿನಲ್ಲಿಯೂ, ಕೆಲವರು ಕೈ ತೊಡೆಗಳಲ್ಲಿಯೂ ಮತ್ತೆ ಕೆಲವರು ಇಡೀ ಶರೀರದಲ್ಲಿಯೂ ಸಂಗೀತವನ್ನು ಶುರು ಮಾಡಿದ್ದರು. ಈ ತರಹ ಇಲ್ಲಿ ಪ್ರತಿ ಕಚೇರಿಯಲ್ಲಿಯೂ ಸಾಧಾರಣವಾಗಿ ನಡೆಯುತ್ತೆಂದು ಕೇಳಿದೆ.

ಹೋದವಾರ ಬ್ಲ್ಯಾಕ್‌ಔಟಿನಲ್ಲಿ ಒಬ್ಬಾತ ಒಬ್ಬ ಹೆಂಗಸಿಗೆ ಡಿಕ್ಕಿ ಹೊಡೆದನಂತೆ. ಹಾಳು ಅದನ್ನು ನಿಲ್ಲಿಸಬೇಕು ಅಂತ ಗೊಣಗುಟ್ಟುತ್ತಿದ್ದ.

ಪ್ರತಿ ಸಿನಿಮಾಗಳಲ್ಲಿಯೂ "ಇಲ್ಲಿ ಹೇಸಿಗೆ ಮಾಡಲಾಗದು" ಎಂದು (ತಮಿಳಿನಲ್ಲಿ) "ಕ್ಲೋಕ್ ರೂಂ" ಗೋಡೆಯ ಮೇಲೆಯೇ ಬರೆದಿರುತ್ತಾರೆ. ಇದರ ಪರಿಣಾಮ ಸಿನಿಮಾ ಸುತ್ತಮುತ್ತಲಲ್ಲಿ ನೋಡಬಹುದು.

ಇಲ್ಲಿ ಹೋಟೇಲುಗಳಲ್ಲಿ ಅದಷ್ಟೂ ರಕ್ತಪುಷ್ಟಿಯಾದ ಆಹಾರ ಕೊಡುತ್ತಾರಂತೆ. ಏಕೆಂದರೆ—ಕೆರೆಯ ನೀರನು ಕೆರೆಗೆ ಚೆಲ್ಲಿ ಎಂಬಂತೆ ನಮ್ಮ ರಕ್ತದಲ್ಲಿ ಹೆಚ್ಚುಭಾಗ ಅವರಿಟ್ಟಿರುವ ತಿಗಣೆಗಳಿಗೇ ಹೋಗುತ್ತಂತೆ.

"ಫ್ರೈಡಿನಿಂದ..........."

(ಭಜಗೋವಿಂದಂ! ಎಂಬಂತೆ)

[ಮಠದ ಕ್ಷಮೆ ಬೇಡಿ]

ಫ್ರೈಡಿನಿಂದ 'ಮಾರ್ಕೆಟ್ಟಿಗೆ ಹೋಗಲು
ಡ್ರೈಡ್ ತರಕಾರಿಯೂ ಸಿಗದಿರಲು
ಟೈರ್ಡಾಗಿ ಬೆವರುತ ಮನೆಯೊಳು ಹೊಕ್ಕರೆ
ಫೈರ್ಡ್ ಬೈ ಯುವರ್ ಬೆಟರ್ ಹಾಫಲ್ಲಯ್ಯಾ ||೧||

ದಬ್ಬಣಸಾಲದ ಅಕ್ಕಿಯೇ ಲೇಸು
ರಬ್ಬರ್‌ಗಿಂತ ಎಷ್ಟೋ ಮೇಲು
ಕಬ್ಬನ್ ಪಾರ್ಕಿನ ಫಾಳಿಯೇ ಸಾಕು
ರಿಬ್ಬನ್ ತರಲಿಕ್ಕಾಸಿದ್ದ್ರಾಯ್ತು ||೨||

ಎಷ್ಟೇಳಲಿ ವಾರ್ ಮುಗಿಯೋವರೆಗೂ
ಜಸ್ಟ್ ಲೈಕ್ ದಟ್ ಅನುಭವಿಸಲೇಬೇಕು
ಲೆಸ್ಟ್ ನಮ್ಮಾಕೇಸ್ ಷುರು ಮಾಡಾರು ಡೊ-
ಮೆಸ್ಟಿಕ್ ವಾರ್ ಯೂ ಬೆಟರ್ ಬೀಕೇರ್‌ಫುಲ್ ||೩||

ಪ್ರತಿಮೋಡಕ್ಕೊಂದು ಸಿಲ್ವರ್ ಲೈನಿಂಗ್
ಕೃತಯುಗದಿಂದಲು ಬಂದಿಹುದು
ಸತಿಯ ಬೆದರಿಪ ಗುಟ್ಟನು ಕೇಳು
ವಿತ್ ಕಾಷನ್ ನೀ ನಡಿಸಲುಬೇಕು ||೪||

ಹಾಂಗೆ ಕೆಲಸಕೆ ಸ್ಪ್ರೈ ಮಾಡಲು
ನಾಗಸಾಕಿ ಥಾಂಗೂಂವ ಬಾರಿಸು
ಭಾರಿಭಾರಿ ಬಾಂಬ್! ರಷ್ಯ! ಹಿಟ್ಲರ್!
ನೇರಿಸಿ ಜೋಡಿಸಿ ರಬ್ ಇಟ್ ಇನ್ ||೫||

[illegible] ಸೋಟಿಂಗ್ ನಮ್ಮಾ[illegible]
ಮಾತಿಲ್ಲದ ಆ ಕಳವಳ– ಚೇಂಜ್!
ಷರ್ಟ್ಟ್ರಿಕ್ಸ್ ಜೊರಬಿತ್ತೊ, ಅಂದರೆ
ಕೋರ್ಟಿಂಗ್ ಟ್ರಬಲ್ ಎಂದೂ ತಪ್ಪದು ||೬||

[ಮುಂದುವರಿಯುವುದು]

— ಕೇ[illegible]

'ಕೆನಡಾ'ದಲ್ಲಿನ ಸಂಭಾಷಣೆ

"ಏನ್ರಿ, ಈ ಹಿಂದೂಸ್ಥಾನ ಎಲ್ಲಿದೆ?"

"ಬರ್ಮಾದ ಬಲಗಡೆ ಇದೆ ಕಣೆ, ಅಲ್ಲೇ ನಮ್ಮ ಮೇಯೋ ಕುಣಿಯೋದು ಕಲಿತಿದ್ದು".

"ಆ ದೇಶದ ವಿಚಾರ ನಿಮಗೇನು ಗೊತ್ತು ?"

"ಆ ದೇಶದ ರಾಜ ಸಾವಿರಾರುಮೈಲಿ ದೂರದಲ್ಲಿ ಸುರಕ್ಷಿತವಾಗಿದ್ದಾನೆ. ಅವನ ಪ್ರತಿನಿಧಿ ಒಬ್ಬ ಆ ದೇಶವನ್ನಾಳುತ್ತಾನೆ. ಅವನಿಗೆ ಸಹಾಯಕ್ಕಾಗಿ ಹಲವು ಸಚಿವರಿದ್ದಾರೆ ಬಡಾಯಿಗನುಸಾರವಾಗಿ ಅವರುಗಳಿಗೆ ಕೆಲಸ ಹಂಚುತ್ತಾರೆ ಆ ದೇಶದಲ್ಲಿ ಜನರೂ ಇದ್ದಾರೆ, ನಮ್ಮೂರಿನಲ್ಲಿ ಇಲಿಗಳಿದ್ದಹಾಗೆ"—

"ಇಷ್ಟೇನೆ, ನಿಮಗೆ ಗೊತ್ತಿರೋದು."

"ಇಷ್ಟೇ, ನೀನು ಇಂಡಿಯಾ ಕಛೇರಿಗೆ ಹೋಗಿ ಮಹಾಮಹಾ ಅಮೆರಿಯನ್ನು ಕೇಳಿದರೂ ಇಷ್ಟೆ ವಿಷಯ ತಿಳಿದುಬರೋದು, ರಾಜನಿಗಾದರೂ ಇಷ್ಟೇ ಗೊತ್ತು."

"ಅಲ್ಲಿನ ಜನರು ಏನು ತಿನ್ನುತ್ತಾರೆ ?"

"ಸಿಕ್ಕಿದಾಗ ಅನ್ನ ಇಲ್ಲದಾಗ ಮಣ್ಣು, ಅದಕ್ಕೇ ಅವರು ದೇವತೆಗಳನ್ನೂ ಆಹಾರಕ್ಕೆ ಅನುಗುಣವಾಗಿ ಏರ್ಪಡಿಸಿಕೊಂಡಿದ್ದಾರೆ, ಗರುಕಪ್ರಿಯ ಗಣೇಶ ಮೊದಲು ದೇವರು, ವಿಷತಿನ್ನೋ ಈಶ್ವರ ಹೆದ್ದೇವರು, ಕೊಳಲು ಊದ್ತೋ ಕೃಷ್ಣ ಇನ್ನೊಬ್ಬ ದೇವರು, ಹೀಗೆ ನೋಡು ಆದೇಶದಲ್ಲಿ."

"ಯಾವ ತರಹ ಬಟ್ಟೆ ಉಡುತ್ತಾರೆ ?"

"ಅಯ್ಯೋ ಅದು ಯಾಕೆ ಕೇಳ್ತಿ? ಟಪಲುಟ್ಟು ಜೀವನ ನಡೆಸೋ ಗಂಡಸರು ಹೆಂಗಸರೂ ಕೂಡ ಇದ್ದಾರಲ್ಲಿ. ಅದೂ ಇಲ್ಲದೆ, ಹರಕಲುಬಟ್ಟೆಯೋರು ಬಲುಜನ, ಕೇವಲ ಮಾನಸಂರಕ್ಷಣೆ ಮಾಡಿಕೊಳ್ಳೋ ಜೋಗಿಗಳೂ ಉಂಟು, ಅದಕ್ಕೇ ಅವರ ದೇವರೂ ಬೆತ್ತಲೆ ದೇವರೇ.

"ಅಲ್ಲಾ ಅಂದ್ರೆ, ಅವರ ಹಣ ಕಾಸು ಇವೆಲ್ಲಾ ಹೇಗೆ ? ಚಿನ್ನ, ಬೆಳ್ಳಿ, ನಾಣ್ಯಗಳಿವೆಯೋ ಹೇಗೆ ?"

"ಛೇ ಛೇ, ಚಿನ್ನ, ಬೆಳ್ಳಿ ಎಲ್ಲಾ ಬಿಳಿಖಜಾನೇಲಿ, ಅಲ್ಲಿ ಕಾಗದದ ಸೊಂಪೇ ಸೊಂಪು, ಅದರಮೇಲೆ ಬರೆದಷ್ಟು ಚಲಾವಣೆ"

ಅದು ಹೋಗಲಿ ಹಾಗೆ, ಕವಡೆನಾದರೂ ಇಟ್ಟುಕೊಂಡು ಕಾಸಿನಂತೆ ಬಳಸ ಬಾರದೇ ?

" ಏನು ಪೆಚ್ಚೆ ನೀನು, ಕವಡೇನೆ ಮೂಗಿಗೆ ಕಟ್ಟಿಕೊಂಡು ಮುನ್ನೂರೈವತ್ತುದಿನವೂ ದುಡಿಯೋಜನ ಆವರು, ಕವಡೆ ಎಂದರೆ, ಕೆರೆಗೆ ಬೀಳುತ್ತಾರೆ, ಅಷ್ಟೆ.

" ಅಲ್ಲಿನ ಜನರಿಗೆ ಮುಂದಾಳುಗಳಿಲ್ಲವೇ, ಅವರಾದರೂ ಜನಜಾಗ್ರತಿ ಮಾಡಬಾರದೇ?''

" ಅದೇನು ಹೇಳ್ತಿ, ಮುಂದಾಳುಗಳಿದ್ದಾರೆ, ಆದರೆ ಅವರಿಗೆ ನೆರೆಯುವರ ಮನೆಯೇ ತವರ್ಮನೆ, ಸೆರೆಮನೆಯೇ ಅತ್ತೆಮನೆ. ಅತ್ತೆಮನೆಗೆ ಹೋದೋರು ಬೇಗ ಹಿಂದಿರುಗುತ್ತಾರೆಯೇ, ಹಾಗಾಗಿ ಮುಂದಾಳುಗಳೆಲ್ಲಾ, ಮುಂದೆಮುಂದೆ ಹೋಗಿಬಿಟ್ಟಿದ್ದಾರೆ, ಹಿಂದುಳಿದವರು ಹಿಂದುಗಳೆ —''

" ಅಯ್ಯೋ ಪಾಪ, ದೇವರೂ ಇವರನ್ನು ಹೀಗೆ ಕೈ ಬಿಡಬಹುದೇ "

" ಪಾಪ ದೇವರೇನು ಮಾಡಿಯಾನು ? ಅಲ್ಲಿರುವ ದೇವರು ಕರೀದೇವರು, ಬಿಳಿ ದೇವರಮುಂದೆ ಅವನಿಗೆಲ್ಲಿ ಪೌರುಷ, ಹೊಟ್ಟೆಕಿಚ್ಚಿನಿಂದ ಹಳದಿಯಾಗಬೇಕು ಅಷ್ಟೆ ಇನ್ನೇನೂ ಸುಖವಿಲ್ಲ.''

" ಹೋಗಲಿ ಬಿಡಿಅಂದ್ರೆ ಯುದ್ಧ ಮುಗಿದಮೇಲೆ ಅಲ್ಲಿಗೆ ಹೋಗಿ ಎಲ್ಲಾ ನೋಡಿಕೊಂಡು ಬರೋಣ.



" ನಾಳೆ Variety Entertainment ಗೆ ಒಂದು ಟಿಕೆಟ್ ತೆಗೊಳ್ಳಿಸಾರ್ "

" Variety Entertainment ! .... ಯಾತಕ್ಕೆ ? ಮುಖ್ಯ ಪುರುಷರಾರೂ ಸತ್ತಿಲ್ಲ, ಈಗೆಲ್ಲೂ ಕ್ಷಾಮ, ಭೂಕಂಪ, ಬೆಂಕಿ ಇತ್ಯಾದಿಗಳೇನೂ ಇಲ್ಲ............ಮತ್ಯಾವ ಹೆಸರಿನಲ್ಲಿ Entertainmet ?"

ಈಗಿನ ಕಾಲವೇ……

—o—

'ದೊಡ್ಡ ತಲೆ'ಗಳ ಗುಂಪೊಂದರ ಸಮೀಪದಲ್ಲೇ ಕುಳಿತಿದ್ದೆ, ಬಾಲ ಮುಚ್ಚಿಕೊಂಡ ಬೆಕ್ಕಿನಂತೆ. ಮಾತುಕತೆ ವಿಚಿತ್ರವಾಗಿ ಸಾಗುತಿತ್ತು. ಪ್ರತಿಯೊಬ್ಬರೂ ತಮ್ಮ ತಮ್ಮ "ಸುವರ್ಣಯುಗ"ಗಳ ಮಹತ್ವವನ್ನು ವರ್ಣಿಸುತ್ತಿದ್ದರು. ಮೆಲ್ಲಗೆ, ಮಾತು ನನ್ನ ಕಿವಿಯಮೇಲೆ ಬೀಳುತಿತ್ತು! ಕನಸ್ಸಿನಲ್ಲಿ ಕೇಳಿಸಿದಂತೆ ಕೇಳಿಸುತ್ತಿತ್ತು.

"ನಮ್ಮ ಕಾಲದಲ್ಲೇ ಬಿಡು! ರೂಪಾಯಿಗೆ 10 ಸೇರು ಬೆಣ್ಣೆಗಿಂತ ಕಮ್ಮಿ ತಂದ ದಿನವೇ ಇಲ್ಲ. ನಾಗಮಂಗಲದ ಬೆಣ್ಣೆ ತಿಂದು ನೋಡಬೇಕು! ಅದು ಬ್ರಹ್ಮಕ್ಕೆ ಏರಬೇಕು, ಆಗ! ಈಗ ಅದನ್ನೆಲ್ಲಾ ಹೇಳಿದರೆ, 'ಹೀಗಿತ್ತೇ' ಎಂದು ಅನ್ನಿಸಬಹುದು. ಆ ಕಾಲವೇ ಕಾಲ! ಸುವರ್ಣಯುಗ ಕಣಯ್ಯಾ 1900 ನೇ ಇಸವಿ ಸುತ್ತಮುತ್ತ, ಈಗಿನ ಕಾಲವೇ…… …."

"ನಮ್ಮ ತಂದೆಕಾಲದ ಮಾತು ಬೇಡ. ಅವರ ಕಾಲದಲ್ಲಿ ಮನೆಯಲ್ಲಾ ಹಾಲುಕೋಡಿಯಿಂದ ತುಂಬಿ ತುಳುಕುತ್ತಾ ಇಲ್ಲದಿದ್ದರೆ, ಅವತ್ತು ಏನೋ ಅಪಶಕುನ ಆಗುತ್ತಿದೆ ಎಂದು ಊಹಿಸುತ್ತಿದ್ದರಂತೆ! ನಾನು ಕಂಡಹಾಗೆ ನಾವು 12 ಜನ ಒಟ್ಟು, ಎರಡು ಹೊತ್ತೂ ಹಾಲು ಕುಡಿದು 'ಕುಯ್ಯುವ ಮೊಸರು' ಹಾಕಿಕೊಳ್ಳುತ್ತಿದ್ದರೂ, ಹಾಲಿನವಳ ಲೆಖ್ಖವನ್ನು ನಾವು ಸರಿಯಾಗಿ ಕೊಡುತ್ತಿದ್ದೇವೆಯೇ ಎನ್ನಿಸುತಿತ್ತು. ನಿರಾಯಾಸವಾದ ಜೀವನ. ಸುವರ್ಣಯುಗ ಕಣಯ್ಯ 1910ನೇ ಇಸವಿಯ ಸುಮಾರಿನ ಕಾಲದಲ್ಲಿ, ಈಗಿನ ಕಾಲವೇ.........."

"ಸೌದೆ, ತುಪ್ಪದ ವಿಷಯಗಳನ್ನು ಮಾತ್ರ ನನ್ನ ಹೆಂಡತಿಯ ಹತ್ತಿರ ಕೇಳಬೇಕು. ಈಗಲೂ ಹೇಳ್ತಾಳೆ. ಮನೇಲಿ ಸೌದೆ, ಬೆಂಕಿಪೆಟ್ಟಿಗೆ (!) ಇಲ್ಲದ ದಿನವೇ ಇಲ್ಲವಂತೆ. ಒಲೆ ಹತ್ತಿಸುವಾಗ ಅವಳ ಕಣ್ಣು ಹೋದ ದಿನವೇ ಇರಲಿಲ್ಲವಂತೆ. ತುಪ್ಪದ ವಿಷಯವೋ........ಮನೆಯಲ್ಲಿ ಊಟ, ತಿಂಡಿ (!) ತೀರ್ಥಕ್ಕೆ, ಯಾರಾದರು ಕೇಳೊಕ್ಕೆ ಬಂದರೆ ಅವರಿಗೆ, ಊರೊರಿಗೆ ಕಳುಹಿಸೊಕ್ಕೆ ಎಲ್ಲಾದಕ್ಕೂ ಅದೇ ಸಾಕಾಗುತಿತ್ತಂತೆ. ವರ್ಷಕ್ಕೆ ಅಬ್ಬಬ್ಬಾ ಎಂದರೆ ಮೂರು ಸರತಿ ಬೆಣ್ಣೆ ತೆಗೆದುಕೊಳ್ಳುತ್ತಿದ್ದರು. ಬೇವುಕಲ್ಲಿನ ಅಪ್ಪಟ ಬೆಣ್ಣೆ ಅಂದರೆ ಈಗಿನವರು ಕಣ್ಣು ಕಣ್ಣು ಬಿಡುತ್ತಾರೆ. ಕಾಲದ ಮಹತ್ತು, 1920ನೇ ಇಸವಿ! ಈಗಿನ ಕಾಲವೇ ...."

"ಅಷ್ಟು ಹಿಂದಕ್ಕೆ ಯಾಕೆ ಹೋಗ್ತೀಯ! ಮೊನ್ನೆ ಮೊನ್ನೆ– 1930-32ನೇ ಇಸವೀಲಿ. ಏನೂ ಅಂದರೆ ಏನು? ನಂದನವನ ನಮ್ಮ ಮನೆ. ಮನೇಗೇ ಇಲ್ಲದೇ ಇದ್ದರೂ, ಅಕ್ಷಯವಾಗಿ ಬರುತಿತ್ತಲ್ಲ ಆ ಧವಸ ಧಾನ್ಯಗಳನ್ನು ಬಾಚಿ

ಕೊಂಡು ಹೋಗುವುದಕ್ಕೆ ತುಕಾರಾಂ, ಮಹಾತ್ಮನ ರೀತಿ ಬಿಟ್ಟಿ, ಬಿಟ್ಟಿ ಬಿಡುತ್ತಿದೆ. 'ಬಟ್ಟೆಗೆ ಖರ್ಚೇ ಆಗುತ್ತಿರಲಿಲ್ಲ! ಸಿನಿಮಾ ವಿಷಯ ತೆಗೆದುಕೊಳ್ಳುತ್ತೀಯಾ....ಎಂಟಾಣೆ ಇದ್ರೆ ಸಾಕು ನೋಡು, ಸಿನಿಮಾ, ತಿಂಡಿ ಖರ್ಚು ಆಗಿ ಹೋಗುತಿತ್ತು. ಪಾಲ್‌ಮುನೀಶ್ವರನಿಂದ ಹಿಡಿದು, ಮಂಗಮ್ಮನವರೆಗೂ ನೋಡಿ ಬಿಡಬಹುದಾಗಿತ್ತು. ಈಗಿನ ಕಾಲವೇ............"

"ನಮ್ಮ ಕಾಲವೇ, ಸುವರ್ಣಯುಗ! ಹತ್ತುಸಾರಿ ಹಾಗೆ ಉಚ್ಚರಿಸಿ, ಸ್ವರ್ಗಕ್ಕೆ ಹೋಗುತ್ತೀರಿ! ಬಟ್ಟೆಗೆ ಕಷ್ಟವಿತ್ತೇ? ಅಕ್ಕಿಗೆ ಧಕ್ಕೆಯೇ? ಬೇರೆ ವಿಷಯ ಕೇಳ್ತೀರಾ? ರೈಲು ಪ್ರಯಾಣಕ್ಕೆ 'ಏಲು' ಬಿಡಿದಿತ್ತೇ! ಕಾಗದದ ಸೋಗೇ? ಕ್ಷಾಮದ ಕ್ಷಾಮವೇ? ಯುದ್ಧದ ಸದ್ದೇ? ಕೇಳಬೇಡಿ, ಕೇಳಬೇಡಿ. ಅಂತಹ ಸುವರ್ಣಯುಗ 1944ನೇ ಇಸವಿ!! ಈಗಿನ ಕಾಲವೇ............"

◆ ◆ ◆

ಬಿವರಿತು! ಎಚ್ಚೆತ್ತೇ!!

—ವೈ. ವೆಂ. ಕೃಷ್ಣಸ್ವಾಮಿ.

ಮಗು ಯಾರಹಾಗಿದೆ?
ಅದರ ಅಪ್ಪನಹಾಗೆ!
ಅಯ್ಯೋ! ಹೌದೇ!

◆ ◆ ◆

"ಪ್ರಯಾಣಕ್ಕೆ ಅನುಕೂಲವಾಗದೆ, ಕೆಟ್ಟುಹೋದ ಬಸ್ಸುಗಳನ್ನು ಏನು ಮಾಡುತ್ತಾರೆ?' (ಪ್ರಶ್ನೆ).... .. ....

ಅಂಥ ಬಸ್ಸುಗಳೇ ಇಲ್ಲ (ಉತ್ತರ).

ಚೌತಿ - ಚಂದ್ರ

ಹಾಲು ಕೊಡುವ ಹಸುವನ್ನು ಎರಡುಭಾಗ ಮಾಡಿ ಮಾಲೀಕರಿಬ್ಬರು ಹಂಚಿಕೊಂಡರೆ ಇಬ್ಬರಿಗೂ ರಕ್ತಮಾಂಸ ಸಿಕ್ಕುತ್ತೆಯೇ ಹೊರತು ಹಾಲಲ್ಲ ಎಂದು ಗಿಣಿ ಹೇಳಿದ ಹಾಗೆ ಹೇಳುತ್ತಿದ್ದ ರಾಜಾಜಿಯವರು, ಇಂದು, ರಕ್ತಮಾಂಸವಾದರೂ ಸಿಕ್ಕಲಿ, ಆದರೆ ಸಿಕ್ಕಿದುದು ಸ್ವಾತಂತ್ರದಿಂದಿರಲಿ ಎನ್ನುವಮಟ್ಟಿಗೆ ಮಾರ್ಪಟ್ಟಿದ್ದಲ್ಲದೇ, ಮಹಾತ್ಮಜೀಯವರನ್ನೂ ತಮ್ಮಂತೇ ತಿರುಗಿಸಿಕೊಂಡಿದ್ದಾರಲ್ಲ! ಏನು ಹೀನ ಅದೃಷ್ಟ ನಮ್ಮ ದೇಶದ್ದು ಅಂತ ಕೊರಗುವವರು ಬಲು ಜನ ಅನ್ನಿ. ಆದರೆ ಹೀಗಾಗಲು ಏನುಕಾರಣ ಎಂದು ಯಾರಾದರೂ ಯೋಚಿಸಿದರೆ? ಇಲ್ಲ.

ಅಮೆರಿಕನ್ನರು ಹಾಗೂ ಇಡೀಪ್ರಪಂಚದೆದುರಿಗೆ ಆಳರಸರ ಅಭಿಮತವನ್ನು ಹೊರಗೆಡಹಲು ಹೀಗೆ ಮಾಡಿದರೆಂದು ಕೆಲವರು.

ಆಳರಸರ ಬಾಯ್ಮಾತನ್ನು ಅವರ ತಲೆಗೆ ಕಟ್ಟಲೋಸುಗ, ಹಾಗೆಮಾಡಿ ಸ್ವಾತಂತ್ರ ಸಾಧಿಸಲೋಸುಗ ಹೀಗೆಮಾಡಿದರೆಂದು ಇನ್ನು ಕೆಲವರು.

ಆದರೆ ಇವರೀರ್ವರೂ ಸೋದರ ಮುಸ್ಲಿಂರೊಂದಿಗೆ ದಿಟವಾಗಿಯೂ ಸೌಹಾರ್ದವನ್ನೇರ್ಪಡಿಸಲು, ಚಿರಶಾಂತಿ ಸಾಧಿಸಲು ಹೀಗೆ ಮಾಡಿದರೆಂದು ಯಾರೂ ಒಪ್ಪುವುದಿಲ್ಲ, ಏಕೆಗೊತ್ತೆ?

ಇಬ್ಬರೂ ಈ ಸಾರಿ ಚೌತಿ ಚಂದ್ರನನ್ನು ನೋಡಿದ್ದರು. ಅಂದಮೇಲೆ ಅಪವಾದ ತಪ್ಪೀತೆ?

❖

ಅತ್ತ ರೂಸ್‌ವೆಲ್ಟರು ತನ್ನ ನಂಬುಗೆಯ ಮಿತ್ರ ಫಿಲಿಪ್ಸರನ್ನು ಭಾರತಕ್ಕೆ ಕಳುಹಿಸಿದರು. ತಮ್ಮ ಸೈನ್ಯದ ಹಿತಚಿಂತನೆಮಾಡುವ ದೇಶಪ್ರೇಮಿಯು, ಇದನ್ನು ಮಾಡಿದುದರಲ್ಲಿ ಆಶ್ಚರ್ಯವೇನಿದೆ? ಫಿಲಿಪ್ಸರೂ ಬಂದರು, ಅಮೆರಿಕನ್ ಸೈನ್ಯಗಳಿದ್ದೆಡೆಗೆಲ್ಲಾ ಹೋದರು. ಅವರ ಸುಖದುಃಖ ವಿಚಾರಿಸಿದರು. ಅದಕ್ಕೆ ನಿವಾರಣೋಪಾಯಗಳನ್ನೂ ಸೂಚಿಸಿದರು. ಅವುಗಳು ಜಾರಿಗೆ ಬರುವಂತೆ, ಭಾರತ ಸರ್ಕಾರವನ್ನು ಜಾಗ್ರತಗೊಳಿಸಿದರು.

ಆದರೆ ನೋಡಿ ನಮ್ಮವರಂದುಕೊಂಡರು, "ಫಿಲಿಪ್ಸರು ಬಂದರು, ದೇಶದಸ್ಥಿತಿಯನ್ನು ನೋಡಿದರು, ಕೇಂದ್ರಸರ್ಕಾರದ ಜೂರತ್ತನ್ನು ಕಂಡರು. ಇನ್ನೇನು ಅಮೇರಿಕಾಕ್ಕೆ ಹಿಂದಿರುಗಿ ರೂಸ್‌ವೆಲ್ಟರಿಗೆ ಹೇಳುವುದೇ ತಡ. ಆತನು ಚರ್ಚಿಲ್ಲರಿಗೆ ಹೇಳಿ ಭಾರತಕ್ಕೆ ಸ್ವಾತಂತ್ರ ಕೊಡಿಸುತ್ತಾನೆ," ಎಂದು,

ಹೀಗೆ ನತದೃಷ್ಟ ಭಾರತೀಯರು ಹಲವರು ಅಂದುಕೊಂಡಿದ್ದು ರೂಸ್‌ವೆಲ್ಟನ ತಪ್ಪೆ?

ಈಗ ಈ ಭಾರತೀಯರೇ, ಆಶಾವಾದಿಗಳಾಗಿದ್ದು, ಈಗ ಆಶಾಭಂಗವಾದುದನ್ನು ನೋಡಿ, "ಅಮೆರಿಕನ್ನರಿಗೆ ನಮ್ಮಲ್ಲಿ ಎಳ್ಳಷ್ಟು ಪ್ರೀತಿಯಿಲ್ಲ. ನಮಗೆ ಸ್ವಾತಂತ್ರ ಸಿಕ್ಕರೇನು ಬಿಟ್ಟರೇನು," ಎಂದು ಸಿಕ್ಕಾಪಟ್ಟೆ ಅವರನ್ನು ದೂಷಿಸುತ್ತಾರೆ

ಮುಖ್ಯ ರೂಸ್‌ವೆಲ್ಟನ ಅಪವಾದಕ್ಕೆ ಕಾರಣಗೊತ್ತೆ? ಆತನೂ ಚೌತಿ ಚಂದ್ರನನ್ನು ನೋಡಿದ್ದನು.

* * *

ಚಿಯಾಂಗ್ ಕೈಷೆಕ್‌ನ ಹಣೇಬರಹನೋಡಿ-ದೇಶದಲ್ಲಿದ್ದ ಹಲವಾರು ಪಂಗಡಗಳನ್ನು ಒಟ್ಟುಗೂಡಿಸಿ ಮೇಲೆ ಬಿದ್ದ ಜಪಾನರನ್ನು ಆರೇಳು ವರ್ಷ ಎದುರಿಸಿ, ಸತ್ತು ಸುಣ್ಣವಾದ ಜನರಲಿಸ್ಸಿಮೋ, ಇಂದು ಅಪವಾದಕ್ಕೆ ಈಡಾಗಿದ್ದಾನಂತೆ ಅದೂ ಚೈನಾದಲ್ಲೇ—

ಅಲ್ಲಿ ಜನರು ಆಗಲೇ ಹೇಳುತ್ತಿರುವರಂತೆ, "ಲೋಕದ ನಾಲ್ಕು ಹಿರಿಯ ರಾಷ್ಟ್ರಗಳು ಎಂದರೆ ಅಮೆರಿಕಾ, ಬ್ರಿಟನ್ ಚೈನಾ ರಷ್ಯಾ. ಎಂದು. ಈ ನಾಲ್ಕು ಹಿರಿಯ ರಾಷ್ಟ್ರಗಳಲ್ಲಿ ಚೈನಾ ಹೆಸರು ಜಪಾನು ಅಳಿಯುವ ತನಕ, ಅನಂತರ ಮೂರೇ ಹಿರಿಯ ರಾಷ್ಟ್ರಗಳು. ಇದಕ್ಕೆ ನೆರವಾದ ಪ್ರಭೃತಿ ಎಂದರೆ ಚಿಯಾಂಗ್ ಕೈಷೆಕ್" ಎಂದು.

ಇದು ನ್ಯಾಯವೇ, ಜವಹರಲಾಲರಿಂದ ಮನ್ನಣೆ ಪಡೆದ ಚಿಯಾಂಗ್ ದಂಪತಿಗಳು ತಮ್ಮ ಸರ್ವಸ್ವವನ್ನೇ ದೇಶಕ್ಕೆ ಎರೆದಿರುವರು, ಇಡೀ ಜೀವಮಾನವನ್ನೇ ರಾಷ್ಟ್ರಕ್ಕೆ ಮೀಸಲಾಗಿಟ್ಟಿರುವರು, ಅವರಿಗೂ ಈ ಅಪವಾದವೇ?

ಕಾರಣ, ಚೌತಿ ಚಂದ್ರನನ್ನು ನೋಡಿದ್ದು.

* * *

ಅಷ್ಟುದೂರ ಏಕೆ? ಮೊನ್ನೆ ಮೊನ್ನೆ ಗಣಪತಿ ಉತ್ಸವ. ವಿದ್ಯಾಗಣಪತಿಯ ಮಂಗಳಾರತಿ. ಗಣೇಶನನ್ನು ನೀರುಪಾಲು ಮಾಡಿದಮೇಲೆ ನೆರೆದಿದ್ದ ಅತಿಥಿಗಳಿಗೆಲ್ಲಾ ಸಂತುಷ್ಟಭೋಜನ. ಸಣ್ಣಕ್ಕಿ ಅನ್ನ. ಶ್ಯಾವಿಗೆಪಾಯಸ,

ಚಿರೋಟಿ, ಬೆಣ್ಣೆಕಾಸಿದ ತುಪ್ಪ, ತರಹಾವರಿ ತರಕಾರಿ, ಇತ್ಯಾದಿ ಇತ್ಯಾದಿ, ಉಂಡವರೆಲ್ಲರೂ ಗಣೇಶನಂತಾದರು. ಆದರೂ ಇವೆಲ್ಲವನ್ನೂ ಕಾರ್ಯರೂಪಿಗೆ ತಂದ ಕಾರ್ಯದರ್ಶಿಗೆ ಅಪವಾದ: ಈ ಬರಗಾಲದಲ್ಲಿ ಇಷ್ಟು ಸುಖಭೋಜನಕ್ಕೆ ಸಾಮಗ್ರಿ ಎಲ್ಲಿ ದೊರಕಿಸಿದರು, ಎಂದು ತಿಂದವರೇ ಪ್ರಶ್ನಿಸಹತ್ತಿದ್ದಾರಂತೆ.

ಕಾರ್ಯದರ್ಶಿಗೆ ರೇಷನಿಂಗ್ ಕಛೇರಿಯಲ್ಲಿ ದೊಡ್ಡ ಹುದ್ದೆ ಇರುವುದು ದಿಟ ಆದ ಮಾತ್ರಕ್ಕೇ ಈ ಅಪವಾದಕ್ಕೆ ಸಿಕ್ಕಬೇಕೆ?

ಮುಖ್ಯ ಚೌತೀಚಂದ್ರನನ್ನು ನೋಡಬಾರದಿತ್ತು —

—ಶಿವಣ್ಣ.

✤ ✤

[ಈ ಅಪವಾದ ಮಾಲೆಯನ್ನು ಬರೆದ ಶಿವಣ್ಣನವರು ಚೌತಿ ಚಂದ್ರನನ್ನು ನೋಡಿರಲಾರರು. ಆದರೆ ಇದನ್ನು ಪ್ರಚುರಪಡಿಸಿದ ನಾವು ಚೌತಿ ಚಂದ್ರನನ್ನು ತಪ್ಪಿ ನೋಡಿದ್ದೆವು, ನಮಗೇನು ಕಾದಿದೆಯೋ ಗಣೇಶನೇ ಬಲ್ಲ. ಸಂ.]



“ಶೀ, ಅಪ್ಪನ್ನ ಈಗ ಕೇಳೋಕೆ ಹೋಗಬೇಡ. ಬಹಳ ಕೋಪವಾಗಿದ್ದಾರೆ.”

ನಾಟಕಸ್ತ್ರೀ..........ಗೆ

(ಪ್ರಗತಿ ಕವನ)

ಘಂಟಾನಾದಂ—
ಅಂಕಪರದೇಳನಂ
ರಂಗಪ್ರವೇಶನಂ

* * *

ಬಣ್ಣ !
ದೀಪದ ಸಾಲು !
ಸೀರೆ !
ಕಿಂಕಾಪ ಮಿರುಗು !
ಮಾತು !
ಬಳೆ ಮೊಳಗು !
ಹಾಡು !
ಹಾರ್ಮೋನಿಯಂ !
ನೃತ್ಯ !
ಲತೆಯ ಲಾಸ !
ಹಾಸ್ಯ !
ಕೆಂಪು ರಂಗಾಧರ !

* * *

ರಂಗಪಲಾಯನಂ
ಅಂಕಪರದಾಕರ್ಷಣಂ

* * *

ಹಾಸ್ಯ, ನೃತ್ಯ, ಹಾಡು, ಮಾತು
ಮಿರುಗುರಂಗು ಬಣ್ಣ ದೀಪ,
ಎಲ್ಲ ಅಳಿದು,
ಉಳಿದುದೇನು ?
ಕೈಚಪ್ಪಾಳೆದನಿ ಕಿವಿಯೊಳಗೆ !
ಐದ್ರೂಪಾಯಿನೋಟು ಕೈಯೊಳಗೆ !

ಪಾಪ ಯಾರದು ?

ಗುಂತಕಲ್ ದಾಟಿ ಹಿಂದೂಪುರಕ್ಕೆ ಬಂತು ರೈಲು; ನನ್ನ ಗಾಡಿಯ ಬಲ ಗಡೆ ಮೂಲೆಯಲ್ಲಿ ಕೂತು ಗೊರಕೆ ಹೊಡೆಯುತ್ತಿದ್ದವರೊಬ್ಬರು ಕಣ್ಣು ತೆರೆದು ನನ್ನನ್ನೇ ದುರುಗುಟ್ಟಿ ನೋಡಿದರು........' ಬೊಂಬಾಯಿಂದ ಬರ್‍ತಿದೀರಾ ? ' ಅಂದರು. "ಹೌದು ಅಂದೆ".... ಅವರ ಕಣ್ಣಲ್ಲಿ ನೀರು ಬಂತು. ಯಾವುದೋ ಸಂಕಟವನ್ನು ನುಂಗಿದರು. ಅದು ಗಂಟಲೊಳಕ್ಕೆ ಇಳಿದಿದ್ದನ್ನು ನಾನು ಪ್ರತ್ಯಕ್ಷ ಕಂಡೆ... "ಏಕೆ'' ಎಂದು ವಿಚಾರಿಸಿದೆ. 'ನಾನು ಬೊಂಬಾಯಿಯವನು ; ಆದರೆ, ಅಲ್ಲಿಗೆ ನಾನು ಹೋಗುವಹಾಗಿಲ್ಲ. ಪ್ರಾಣ ಇರುವವರೆಗೂ....' ಎಂದು ಗೋಳಿಟ್ಟರು ....ನನ್ನ ಹತ್ತಿರಕ್ಕೆ ಸರಿದು ಕೂತರು..........."ಗಡೀಪಾರು ಆಜ್ಞೆಯೋ ?" ಎಂದು ನಾನು ಪಿಸುಗುಟ್ಟಿದೆ "ಅಲ್ಲ ! ಮರಣಶಿಕ್ಷೆ. ನಾನು ಸತ್ತಿದೇನೆ'' ಅಂದರು !

ನನಗೆ ದಿಗಿಲಾಯಿತು. ಕೊಂಚ ದೂರ ಸರಿದೆ. ಅವರು ಹತ್ತಿರಕ್ಕೆ ಬಂದರು.

"ಭಯಪಡಬೇಡಿ !.......ವಿವರಿಸುತ್ತೇನೆ........ನೀವು ಕ್ಷೇಮಚಂದ್ ಅಂತ ಕೇಳಿದ್ದೀರಾ ? ''

"ಯಾವ ಕ್ಷೇಮಚಂದ್ ? ಪ್ರಖ್ಯಾತ ಕವಿಗಳೇ ? ಜಗದ್ವಿಖ್ಯಾತ ನಾಟಕ ಕಾರರೇ ? "

"ಹೌದು ! "ದುರಂತ-ವಸಂತ'' ನಾಟಕ ಬರೆದವರು ! ಮೊನ್ನೆ ಬೊಂಬಾಯಿಯಲ್ಲಿ ಸಹಸ್ರದಿನೋತ್ಸವವನ್ನು ಕೊಂಡಾಡಿದರಲ್ಲಾ, ಆ "ದೀನಾಕ್ಷಿ'' ನಾಟಕದ ಕರ್ತೃ ......ಅವರೇ ! ಅವರನ್ನು ಬಲ್ಲಿರಾ ?"

"ಬಲ್ಲೆ ! ಅವರ ಕೃತಿಗಳನ್ನ ಓದಿದೇನೆ; ಆನಂದಿಸಿದೇನೆ, ಅಮೃತಪಾನ ಮಾಡಿದೇನೆ"

"ಅವನೇ ನಾನು !''

"ಹಾ ! ತಾವು ! ಅವರೇ ?"

"ಹೂಂ ! ಕ್ಷೇಮಚಂದ್ ಸತ್ತಿಲ್ಲ...........ನಾನು ಅವನು .... ನಾನೇ ಅವನು........ಹತ್ತು ವರ್ಷಗಳ ಹಿಂದೆ ನಾನು ಒಬ್ಬ ಬಡ ಲೇಖಕನಾಗಿದ್ದೆ ಕಾಗದಕ್ಕೆ ಗತಿಯಿಲ್ಲದೆ ಗೋಳಾಡುತ್ತಿದ್ದೆ. ನಾಟಕದ ಕಂಪನಿಗಳ ಬಾಗಿಲಿನಲ್ಲೇ ಕಾಂಪ್ಲಿಮೆಂಟರಿಗಳಿಗೆ ಗತಿಯಿಲ್ಲದೆ ಹಸ್ತಪ್ರತಿಗಳನ್ನು ಹಿಡಿದು ಕೈಯೊಡ್ಡುತ್ತಿದ್ದೆ. ನನ್ನ "ನೌಕಾಚೌಕ'' ಮಾತ್ರ ಆಗ ಪ್ರಕಟವಾಗಿತ್ತು ! "ರಂಗಭಂಗ'' ಮಾತ್ರ ರಂಗಸ್ಥಳಕ್ಕೆ ಬಂದಿತ್ತು.......ಆದರೆ, ದೈವವಶಾತ್ ಒಂದು ದಿನ "ಸಂಯುಕ್ತ ಕರ್ನಾಟಕ'' ದಲ್ಲಿ ನನ್ನ ಮರಣವಾರ್ತೆಯನ್ನು ಯಾರೋ ಬಾತ್ಮೀದಾರರು ಅಚ್ಚು ಹಾಕಿಸಿದರು ಹೊನ್ನಾವರದ ಹತ್ತಿರ ಮುಳುಗಿದ ಒಂದು ದೋಣಿಯಲ್ಲಿ ನನ್ನ

ಕಳೇಬರವೂ ಇತ್ತು, ಎಂದು ಆತ ತಂತಿ ಕಳುಹಿಸಿದ್ದ ಅಂಕೋಲದಿಂದ!........ ಅಂದಿನಿಂದ ನನ್ನ ಜೀವನವೇ ಬದಲಾಯಿತು........

“ ಹಾಗಾದರೆ ? ”

“ ಹಾಗಾದರೆ, ನಾನು ಆ ವಾರ್ತೆಯನ್ನು ತಿದ್ದಲಿಲ್ಲ........ಅದರಂತೆ ನಾನು ಸಮುದ್ರದಲ್ಲಿ ಸತ್ತೆ. ಮರುದಿನದ ಪತ್ರಿಕೆಗಳಲ್ಲಿ ನನ್ನ ವಿಷಯದ ಚರಮ ಲೇಖನಗಳು ಬಂದುವು. ನನ್ನ ಗುಣಗಾನವು ಚೆನ್ನಾಗಿಯೇ ನಡೆದಿತ್ತು. ನೂರಾರು ಸಭೆಗಳಲ್ಲಿ ಸಾಹಿತ್ಯಪ್ರೇಮಿಗಳು ನನ್ನ ಸಾವಿಗಾಗಿ ಸಂತೋಷದಿಂದ ಮರುಗಿದರು. ಒಂದೆರಡುಕಡೆ ನನ್ನ ‘ ರಂಗಭಂಗ ’ವನ್ನು ಮತ್ತೆ ಆಡಿದರು. ನನ್ನನ್ನ ತರುಣಕವಿ, ಪ್ರತಿಭಾವಂತ, ಲೇಖಣಿಯೋಗಿ, ರಸಪಿಯೂಷ, ದೀನ ದಯಾಪರ ಎಂದು ಹಲವರು ಹೊಗಳಿದರು. “ ನಾಟಕ ” ಎಂಬ ಮಾಸಿಕೆ ಒಂದು ಸ್ಪೆಷಲ್ ನಂಬರ್ ಹೊರಡಿಸಿ ನನಗರ್ಪಿಸಿತು ; ನನ್ನ ಹೆಸರಿನಲ್ಲಿ ನಿಧಿ ಕೂಡಿಸಿ ಹಲವರು ತಿಂದು ತೇಗಿದರು........

“ ಹೌದು ! ಹೌದು ! ಅದರ ವಿಷಯ ನಾನೂ ಬಲ್ಲೆ ”

“ ನನ್ನ ಸ್ಮಾರಕವಾಗಿ ಕ್ಷೇಮಚಂದ್ ಸಂಘಗಳೂ ಪುಸ್ತಕ ಭಂಡಾರಗಳೂ ವಾಚನಾಲಯಗಳೂ, ವ್ಯಾಸಂಗ ಗೋಷ್ಠಿಗಳೂ, ಕಲಾಮಂಟಪಗಳೂ ನೂರಾರು ಹುಟ್ಟಿಕೊಂಡುವು. ನನ್ನ ಸೋದರಮಾವನ ಮಗನೊಬ್ಬನಿದಾನೆ ಹುಬ್ಬಳ್ಳಿಯಲ್ಲಿ ಅವನೊಬ್ಬನಿಗೆ ಮಾತ್ರ ನನ್ನ ವಿಳಾಸ ಗೊತ್ತು. ಮಿಕ್ಕವರಿಗೆಲ್ಲ ನಾನು ಸತ್ತಂತೆಯೇ. ಈಗ ನಾನು ಬೆಂಗಳೂರು ಗುಟ್ಟಿಹಳ್ಳಿ ರಸ್ತೆಯಲ್ಲಿದೇನೆ. ಅಲ್ಲಿಂದ ಹೊಸ ನಾಟಕಗಳನ್ನು ಬರೆದು ಹುಬ್ಬಳ್ಳಿಗೆ ರವಾನಿಸುತ್ತೇನೆ. ಅವನು, “ ಮೊನ್ನೆ ನಾನು ದಿವಂಗತ ಕ್ಷೇಮಚಂದ್‌ರವರ ಕೋಣೆಯಲ್ಲಿನ ಒಂದು ಹಳೇ ಪೆಟ್ಟಿಗೆಯನ್ನು ಶೋಧಿಸಲಾಗಿ, ಅದರ ತಳದಿಂದ “ ದುರಂತ ವಸಂತ ” ಎಂಬ ಈ ನಾಟಕದ ಪ್ರತಿ ಲಭಿಸಿದೆ. ದಿವಂಗತರ ಆತ್ಮಕ್ಕೆ ಶಾಂತಿಯನ್ನೂ ಕಲ್ಯಾಣ ವನ್ನೂ ಕೋರುವ ಪ್ರತಿ ಒಬ್ಬ ಕಲಾಭಿಮಾನಿಯೂ, ಭಾಷಾಭಿಮಾನಿಯೂ....” ಇತ್ಯಾದಿ ಬರೆದು ಅದನ್ನು ಅಚ್ಚು ಹಾಕಿಸುತ್ತಾನೆ. ಜನಗಳು ನನ್ನನ್ನು ಸತ್ತವ ನೆಂದೇ ತಿಳಿದು ಪುರಸ್ಕರಿಸುತ್ತಾರೆ........ಬಂದ ಹಣದಲ್ಲಿ ನಾನು ಈಗಿನ ಬೆಂಗಳೂ ರಲ್ಲೂ ಸಹ ಸುಖವಾಗಿದೇನೆ........ ನಾನು ಬದುಕಿದ್ದರೆ ಈ ಸುಖವನ್ನು ಎಂದಿಗೂ ಕಾಣುತ್ತಿರಲಿಲ್ಲ........

ಆದರೆ, ಒಂದುಸಲ ಬೊಂಬಾಯಿಗೆ ಹೋಗಿಬರಬೇಕೆನಿಸುತ್ತದೆ........ಸಾಧ್ಯ ವಿಲ್ಲ........ಸತ್ತು ಹತ್ತು ವರ್ಷವಾದವನು ಮತ್ತೆ ಅಲ್ಲಿ ಕಾಣಿಸಿಕೊಳ್ಳಬಹುದೇ ?”

ಹೀಗೆಂದು ಹೇಳುತ್ತಾ ಕ್ಷೇಮಚಂದರು ತಮ್ಮ ಸಂಕಟವನ್ನು ನನ್ನೊಂದಿಗೆ ತೋಡಿಕೊಂಡರು.

ನಾನು ಸುಮ್ಮನೆ, “ ಪಾಪ ” ಅಂದೆ........ಆದರೆ, ಅವರನ್ನ ಈ ಸಂಕಟಕ್ಕೆ ಗುರಿಮಾಡಿದ ಪಾಪ ಯಾರದು ?

ಅನರ್ಥಕೋಶ

ಟಕವು : ಧಾರವಾಡ ಕನ್ನಡದ ರೀತ್ಯಾ 'ಪುಕಟ'

ಟಗರು : ಚುನಾವಣೆಗೆ ನಿಂತ ಕುರಿಯಾಳು; 'ಟಗರು ನಾಟಕ ಸೂತ್ರಧಾರಿ' ಎಂಬುದನ್ನು ನೋಡಿ.

ಟಪಾಲು : ಜಗತ್ತಿನ ಪತ್ರವ್ಯವಹಾರದಲ್ಲಿ ನಮ್ಮ ಪಾಲಿಗೆ ಬಂದದ್ದು

ಟಮಟೆ : ವೋಟರು ಮಹಾಶಯರುಗಳನ್ನು ಒಲಿಸಿಕೊಳ್ಳಲು ಒದಗುವ ಒಂದು ಮನೋರಂಜಕ ಸಾಧನ.

ಟಾರ್ : ಮಿಸ್ ಮೇಯೋ ಮುಂತಾದ ಹಲವು ಪರಂಗಿಯವರು ಉಪಯೋಗಿಸುವ ಬಣ್ಣ.

ಟೀ : ಆಯುರ್ವೇದ ಕಷಾಯ

ಟೀಚರ್ : ಉಪಾಧ್ಯಾಯ (ನಪುಂಸಕಲಿಂಗ)

ಟೂರ್ : ಮನೆಯವರ ಕಾಟ ತಪ್ಪಿಸುವುದಕ್ಕೂ, ಸಂಬಳಕ್ಕಿಂತ ಹೆಚ್ಚಾಗಿ ಸಂಪಾದಿಸುವುದಕ್ಕೂ ಸರ್ಕಾರಿ ಅಧಿಕಾರಿಗಳು ಹೂಡುವ ಒಂದು ಉಪಾಯ.

ಟೆಕ್ಸ್ಟ : ವಿದ್ಯಾರ್ಥಿ ಕರಭೂಷಣ

ಟೆಲಿಫೋನ್ : ನಾವು ಮಾತನಾಡಬೇಕೆಂದಿರುವವರ ಹತ್ತಿರ ಬೇರೆ ಯಾರೋ ಮಾತನಾಡುತ್ತಿದ್ದಾರೆ ಎಂದು ಪತ್ತೆ ಹಚ್ಚುವ ಯಂತ್ರ.

ಟೆನ್ನಿಸ್ : ಸೀಮೆಗಾಳಿ ತುಂಬಿದ ಚೀಲಗಳನ್ನು ಬೆಕ್ಕಿನ ಕರುಳಿಂದ ಹೊಡೆಯುವ ಆಟ.

ಟೊಮಾಟೊ : ಕೀಳುವರ್ಗದ ಒಂದು ಹಣ್ಣು; ಈಚೆಗೆ ಇದನ್ನು ಡಾಕ್ಟರುಗಳು ವರ್ಣೋದ್ಧಾರ ಮಾಡಿದಾರೆ.

ಟೋಪಿ : ನಮಗೆ ಇನ್ನು ಮೊದಲು ಹಾಕಿದವರು ಪರಂಗಿಯವರು

ಟೋಲ್‌ಗೇಟ್ : ಲಾರಿಗಳಿಗೆ ಸ್ಪೀಡ್ ಲಿಮಿಟ್ ಇಲ್ಲದ ಒಂದು ಸ್ಥಳ

ಠೀವಿ : ಅಗಸ ಕ್ಷೌರಿಕ ಇವರಿಬ್ಬರ ಸಹಾಯದಿಂದ ನಮಗಾಗುವ ದೊಡ್ಡತನ

ಠೂ : ಶಿಶುಸಾಹಿತ್ಯರೀತ್ಯಾ, ಚರ್ಚಿಲ್ ಹಿಟ್ಲರ್ ಸಂವಾದದ ಮೊದಲನೆಯ ಮಾತು.

ಊಟ ಸಾಗಲಿ

(ಶ್ರೀ ಕೆ. ವಿ ಪುಟ್ಟಪ್ಪನವರ ಕ್ಷಮೆ ಬೇಡಿ)

(ದೋಣಿ ಸಾಗಲಿ - ನವಿಲು)

ಊಟಸಾಗಲಿ ಮುಂದೆ ಹೋಗಲಿ ಡೊಳ್ಳುಹೊಟ್ಟೆಯು ಸೇರಲಿ ।
ಬೀಸಿ ಕುತ್ತಿಗೆ ಬೀಳುತೇಳುತ ತೇಗುವೋಗಡೆ ಹಾರಲಿ ಪ

ತಾಮ್ರಗಿಂಡಿಯು ಹಿಡಿದುಕೈಯೊಳು ಪಾನವಾರಿಯು ಚಿಮುಕಿಸಿ
ಇರುವೆ ಬಾರದೆ ಅನ್ನರಾಸಿಗೆ ಎಲೆಯುಸುತ್ತ ಪರಿಷಿಂಚಿಸಿ
ನೋಡಿ! ಬಾಳೆಲೆ ತುದಿಯುಮುಂಗಡೆ ಭಕ್ಷಭೋಜ್ಯದ ವೈಖರಿ
ರಂಜಿಸುತ್ತಿದೆ; ಚಲುವ ನಾಲಿಗೆ ನಿತ್ಯ ತಿನ್ನಲು ಬಯಸಿರಿ ॥ ೧ ॥

ಕರಿವಶಾವಿಗೆ ಕೀರಮೋಗಡೆ ಪನಿಗಳಂದದಿ ಘೃತಮಣಿ
ಮಿಂಚುತಿರ್ಪವು ಮೂಡುತೈತರಿ ದ್ರಾಕ್ಷಿಕೇಸರಿ ರವೆಮಣಿ
ಬಿಸಿಯು ಹೋಳಿಗೆ ಸುಟ್ಟವಾಸನೆ ತೀಡಿಗಮ್ಮನೆ ಬರುತಿದೆ
ಹುದುಗಿನುಂಗುವ ಮತ್ತ ಕಂಠವು ಕಿರಲವಾಣಿಯು ತರುತಿದೆ ॥ ೨ ॥

ಊರಸಂತೆಯು ಮಾಳಮೇಯುವ ಬಿಳಿಯುಗೂಳಿಯು ನೋಡಿರಿ
ಅದನೆ ಹೋಲುತ ಅಂತೆ ತೇಗುತ ಹಬ್ಬದೂಟವ ಮಾಡಿರಿ
ನಾವು ಲೀಲಾಮಾತ್ರಜೀವರು; ನಮ್ಮ ಜೀವನ ಲೀಲೆಗೆ
ನಿನ್ನೆ ನಿನ್ನೆಗೆ, ಇಂದು ಇಂದಿಗೆ, ಇರಲಿ ನಾಳೆಯು ನಾಳೆಗೆ ॥ ೩ ॥

—ಬಿ. ಎಸ್. ರಾಮಾಚಾರ್ಯ.

"ಅಮೆರಿಕಾ ದೇಶದವರು ನಮ್ಮ ದೇಶಕ್ಕೆ ಅಗ್ಗದ ಅಲಾರಂ ಗಡಿಯಾರಗಳನ್ನು ರವಾನಿಸಿದರೆ ನಾವೇನು ಮಾಡಬೇಕು?" (ಉಪನ್ಯಾಸಕರ ಪ್ರಶ್ನೆ)........
........ಎಚ್ಚತ್ತುಕೊಳ್ಳಬೇಕು.

✦ ✦ ✦

"ಮಕ್ಕಳ ಪುಸ್ತಕ"ದಲ್ಲಿ ಈ ವಾರದಿಂದ "ಹಿರಿಯರ ಪುಟ" ಪ್ರಕಟವಾಗಲಿದೆಯಂತೆ!


ಮಕ್ಕಳಿಗೆ ಆರೋಗ್ಯವನ್ನು
ಕೊಡುತ್ತದೆ

ಭಾರತದ ಖ್ಯಾತಿ ಉಳಿದಿರುವುದು



ಭಾರತ ಸ್ತ್ರೀಯರ ಅಪ್ರತಿಮ

ಸತೀತ್ವದಿಂದ

ಈ ಸತೀತ್ವದ ಮಹಿಮೆಯನ್ನು

ಸನ್‌ರೈಸ್

ಪಿಕ್ಚರ್ಸ್‌ರವರ

ಸತೀ ಅನಸೂಯ

(ದತ್ತಾತ್ರೇಯ ಜನನ)

— ಚಿತ್ರದಲ್ಲಿ ನೋಡಿರಿ —

ತಾರಾಗಣ :— ದುರ್ಗಾಖೋಟೆ ಃ ಃ ಶೋಭನಾಸಮರ್ಥ್,

ಶಾಹುಮೋಡಕ್ ಮುಂತಾದವರು

ಬೆಂಗಳೂರು ವಿಜಯಾ ಟಾಕೀಸಿನಲ್ಲಿ ನಿರೀಕ್ಷಿಸಿರಿ.

DISTRIBUTORS' FOR :

COORG, SOUTH CANARA, NIZAMS DOMINIONS,
ANDHRA AND CEDED DISTRICTS

Mahaveer Pictures Circuit

385, Chickpet :: :: Bangalore City

C.P.S. M.A.I.

Printed by B. S. Iyengar, Bangalore City.

Publisher—B. N. Gupta, Editor—M. SHIVARAM.